**(313 statement)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

## **Spl. C. No.** 07/2015

| | | |
|---|---|---|
| ಆರೋಪಿಯ ಹೆಸರು | : | ಗಣೇಶ ನಾಯ್ಕ |
| ತಂದೆಯ ಹೆಸರು | : | ಅನಂತ ನಾಯ್ಕ |
| ವಯಸ್ಸು | : | 58 ವರ್ಷ |
| ಕೆಲಸ | : | ಉಪನ್ಯಾಸಕರು, ಜಿಲ್ಲಾ ಪ್ರಶಿಕ್ಷಣ ತರಬೇತಿ ಸಂಸ್ಥೆ , ಕುಮಟಾ. |
| ವಾಸ್ತವ್ಯ | : | ಕುಮಟಾ. |

**ಕಲಂ 313 ಸಿ ಆರ್ ಪಿ ಸಿ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆಃ1 ನಿನಗೆ ಕನ್ನಡ ಭಾಷೆ ಓದಲು, ಬರೆಯಲು ಹಾಗೂ ಓದಿ ಹೇಳಿದ್ದನ್ನು ಅರ್ಥೈಸಿಕೊಳ್ಳಲು ಬರುತ್ತದೆಯೇ.?

ಉತ್ತರಃ ಹೌದು.

ಪ್ರಶ್ನೆಃ2 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ನ್ಯಾಯಾಲಯದ ಮುಂದೆ ಕೊಟ್ಟ ಹೇಳಿಕೆಗಳನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ ಹೌದು.

ಪ್ರಶ್ನೆಃ3 **ದೋಸಾ–2/ಪ್ರಾಸಾ–1 ದರ್ಶನ ಶಾಂತಾರಾಮ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು 10 ವರ್ಷದಿಂದ ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಕಾರವಾರದಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ4 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 16.09.2013 ರಂದು ಲೋಕಾಯುಕ್ತ ಠಾಣೆಯಿಂದ ಪಂಚರಾಗಿ ಸಹಕರಿಸುವಂತೆ ತನ್ನ ಮೇಲಾಧಿಕಾರಿಯವರಿಗೆ ಸಿಬ್ಬಂದಿಯೊಬ್ಬರನ್ನು ಕಳುಹಿಸುವಂತೆ ಪತ್ರ ಬಂದಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು

ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ5 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತನ್ನ ಮೇಲಾಧಿಕಾರಿಯವರು ತನ್ನನ್ನು ಪಂಚರನ್ನಾಗಿ ಹೋಗುವಂತೆ ನೇಮಕ ಮಾಡಿ ಕಳುಹಿಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ6 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಕಾರವಾರದ ಲೋಕಾಯುಕ್ತ ಕಚೇರಿಯಲ್ಲಿ ಆರಕ್ಷಕ ಉಪಾಧೀಕ್ಷಕರ ಮುಂದೆ ಹೋಗಿ ಹಾಜರಾದಾಗ, ಅಲ್ಲಿ ಇನ್ನೊಬ್ಬ ಪಂಚರಾಗಿ ದಿವಾಕರ ಕುಲಕರ್ಣಿ ಎನ್ನುವವರು ಹೆಸ್ಕಾಂ ಸಂಸ್ಥೆಯಿಂದ ಹಾಜರಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ7 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಕಾರವಾರದ ಲೋಕಾಯುಕ್ತ ಕಚೇರಿಯಲ್ಲಿ ಇದ್ದ ಫಿರ್ಯಾದುದಾರರನ್ನು ಪರಿಚಯ ಮಾಡಿಕೊಟ್ಟರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ8 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫಿರ್ಯಾದುದಾರರಿಂದ ಅಕ್ಷರ ದಾಸೋಹ ಜಿಲ್ಲಾ ಪಂಚಾಯತ್, ಕುಮಟಾ ಕಚೇರಿಯ ಸಹಾಯಕ ನಿರ್ದೇಶಕರಾದ ಗಣೇಶ ಅನಂತ ನಾಯ್ಕ ಎನ್ನುವವರು ರೂ.5,000/- ಲಂಚವನ್ನು ಕೇಳುತ್ತಿರುವುದಾಗಿ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ9 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಲೋಕಾಯುಕ್ತ ಉಪಾಧೀಕ್ಷಕರು ಫಿರ್ಯಾದುದಾರರು ಕೊಟ್ಟಿದ್ದ ದೂರನ್ನು ತಮಗೆ ಓದಿ ಹೇಳಿ ಅದಕ್ಕೆ ರುಜು ಮಾಡುವಂತೆ ಕೇಳಿದಾಗ ತಾವು ರುಜು ಮಾಡಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ10 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಲೋಕಾಯುಕ್ತ ಉಪಾಧೀಕ್ಷಕರು ತನಿಖೆಗೆ ಸಹಕರಿಸಬೇಕು ಎಂದು ತಮಗೆ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ11 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಲೋಕಾಯುಕ್ತ ಪೊಲೀಸ್ ನವರು ರೂ. 3,000/- ಅನ್ನು ತನ್ನ ಕೈಗೆ ಕೊಟ್ಟು ಎಣಿಸುವಂತೆ ಹೇಳಿದ್ದು, ಅದರಲ್ಲಿ ರೂ. 1,000/- ಎರಡು ನೋಟು ಮತ್ತು ರೂ. 500/- ಎರಡು ನೋಟು ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ12 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ನೋಟುಗಳ ಸಂಖ್ಯೆಗಳನ್ನು ಓದಿ ತಿಳಿಸುವಂತೆ ಹೇಳಿದಾಗ ತಾನು ಅದನ್ನು ಓದಿ ಹೇಳಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ13 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಲೋಕಾಯುಕ್ತ ಸಿಬ್ಬಂದಿಯಿಂದ ಉಪಾಧೀಕ್ಷಕರು ಆ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಸವರಿ, ಆ ಫಿನಾಪ್ತಲಿನ್ ಪುಡಿಯಿಂದ ಸ್ವಲ್ಪ ಪುಡಿಯನ್ನು ಮಾದರಿಯನ್ನಾಗಿ ತೆಗೆದು ಅದನ್ನು ಎ ಎಂಬ ಅಕ್ಷರದಿಂದ ಮೊಹರು ಮಾಡಿ ಸೀಲ್ ಮಾಡಿ, ಅದರ ಮೇಲೆ ಅಂಟಿಸಿದ ಚೀಟಿಗೆ ತನ್ನ ರುಜು ಪಡೆದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ14 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಭಟ್ಟಿ ಇಳಿಸಿದ ನೀರನ್ನು ತೆಗೆದುಕೊಂಡು ಅದರಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿ ಹಾಕಿ ದ್ರಾವಣ ತಯಾರಿಸಿದರು ಮತ್ತು ತನಗೆ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ಕೊಟ್ಟು ಅದನ್ನು ಪುನಃ ಎಣಿಸುವಂತೆ ಹೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:15 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ತನ್ನಿಂದ ಫಿರ್ಯಾದುದಾರರ ಅಂಗಿಯ ಕಿಸೆಯಲ್ಲಿ ಇಡಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:16 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತನ್ನ ಕೈ ಬೆರಳುಗಳನ್ನು ತಯಾರಿಸಿದ್ದ ದ್ರಾವಣದಲ್ಲಿ ಅದ್ದಿಸಿದಾಗ ಮೊದಲು ಬಣ್ಣ ಇಲ್ಲದಿದ್ದ ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:17 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಗುಲಾಬಿ ಬಣ್ಣಕ್ಕೆ ತಿರುಗಿದ ಆ ದ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಅದಕ್ಕೆ ಎ ಎಂಬ ಅಕ್ಷರದ ಮೊಹರನ್ನು ಹಾಕಿ ಸೀಲು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:18 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿ ಛಾಯಾ ಚಿತ್ರಗಳನ್ನು ಪೊಲೀಸ್ ನವರು ತೆಗೆದರು ಮತ್ತು ಅಲ್ಲಿ ನಾಲ್ಕು ಬಾಟಲ್ ಗಳನ್ನು ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:19 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಯಾವ ಉದ್ದೇಶಕ್ಕೆ ನಾಲ್ಕು ಬಾಟಲ್‌ಗಳನ್ನು ಜಪ್ತು ಮಾಡಿದರು ಎಂದು ತನಗೆ ಗೊತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಗೊತ್ತಿಲ್ಲ.

ಪ್ರಶ್ನೆ:20 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಕುಮಟಾಕ್ಕೆ ಟ್ರ್ಯಾಪ್ ಮಾಡಲು ಹೋಗಬೇಕು ಎಂದು ಲೋಕಾಯುಕ್ತ ಉಪಾಧೀಕ್ಷಕರು ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:21 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೊದಲು ಒಂದು ಮೈಕ್ರೋ ಪೋನನ್ನು ಅವರು ಫಿರ್ಯಾದುದಾರರಿಗೆ ಕೊಟ್ಟರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:22 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತನ್ನನ್ನು ಪಂಚ ಒಂದು ಎಂದು ನೇಮಕ ಮಾಡಿ ತಾವು ಎಲ್ಲಿ ಹೋಗಬೇಕು ಹೇಗೆ ವರ್ತಿಸಬೇಕು ಎಂದು ಮಾಹಿತಿಯನ್ನು ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆ:23 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಉಪಾಧೀಕ್ಷಕರು, ಅವರ ಸಿಬ್ಬಂದಿ, ತಾನು, ಇನ್ನೊಬ್ಬ ಪಂಚ ಮತ್ತು ಫಿರ್ಯಾದಿ ಅವರ ಸರ್ಕಾರಿ ವಾಹನದಲ್ಲಿ ಕುಮಟಾಕ್ಕೆ ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:24 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಉಪಾಧೀಕ್ಷಕರ ಸೂಚನೆ ಮೇರೆಗೆ ಕುಮಟಾದಲ್ಲಿ ಗಿಬ್ ಹೈಸ್ಕೂಲ್ ಸರ್ಕಲ್ ಬಳಿ ಇಳಿದೆವು ಮತ್ತು ಅಲ್ಲಿ ಪುನಃ ಉಪಾಧೀಕ್ಷಕರು ತಮಗೆ ಎಲ್ಲರಿಗೂ ತಾವು ಯಾವ ರೀತಿ ಹೋಗಬೇಕು ನಡೆದುಕೊಳ್ಳಬೇಕು ಏನು ಮಾಡಬೇಕು ಎಂದು ಸೂಚನೆಗಳನ್ನು ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:25 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಫಿರ್ಯಾದಿಯವರು ಆರೋಪಿತನಾದ ನಿನಗೆ ಪೋನ್ ಮಾಡಿದಾಗ ಆರೋಪಿ ನೀನು ತಾಲೂಕು ಪಂಚಾಯತಿ ಕಚೇರಿಯಲ್ಲಿ ಇರುವುದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:26 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಮತ್ತು ಫಿರ್ಯಾದಿ ನಡೆದುಕೊಂಡು ತಾಲೂಕು ಪಂಚಾಯತಿ ಕಚೇರಿ ಒಳಗಡೆ

ಹೋದಾಗ ಅಲ್ಲಿ ಆರೋಪಿ ನೀನು ಒಂದು ಕುರ್ಚಿಯಲ್ಲಿ ಕುಳಿತಿದ್ದ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ27 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫಿರ್ಯಾದುದಾರರು ತನಗೆ ಸಣ್ಣ ಧ್ವನಿಯಲ್ಲಿ ಆತನೇ ಆರೋಪಿ ಗಣೇಶ ಅನಂತ ನಾಯ್ಕ ಎಂದು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ28 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ನ್ಯಾಯಾಲಯದ ಕಟಕಟೆಯಲ್ಲಿ ಹಾಜರಿದ್ದಾನೆ ಮತ್ತು ಅವರು ಆರೋಪಿಯಾದ ನಿನ್ನನ್ನು ಗುರುತಿಸುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ29 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿ ನೀನು ಮತ್ತು ಫಿರ್ಯಾದಿ ಪಕ್ಕದಲ್ಲಿ ಇದ್ದ ಒಂದು ಕೋಣೆಗೆ ಹೋಗಿ, ಅಲ್ಲಿ ದುಡ್ಡಿನ ಬಗ್ಗೆ ಸ್ವಲ್ಪ ಮಾತನಾಡಿ ಹೊರಗಡೆ ಬಂದು ಸೈಕಲ್ ಸ್ಟ್ಯಾಂಡ್ ಬಳಿ ಇಬ್ಬರೂ ಹೋದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ30 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಹೊರಗಡೆ ಬಾಗಿಲಿನ ಬಳಿ ಬಂದು ಅಲ್ಲಿಯೇ ಇದ್ದು ಗಮನಿಸುತ್ತಾ ಇದ್ದಾಗ ಫಿರ್ಯಾದುದಾರರು ತಾನು ಕೊಟ್ಟಿದ್ದ ನೋಟುಗಳನ್ನು ಕೈಯಲ್ಲಿ ತೆಗೆದು ಆರೋಪಿಯಾದ ನಿನ್ನ ಕೈಗೆ ಕೊಟ್ಟರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ31 ದೋಸಾ-2/ಪ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಆ ನೋಟುಗಳನ್ನು ತೆಗೆದುಕೊಂಡು ಎರಡೂ ಕೈಯಿಂದ ಎಣಿಸಿ ನಿನ್ನ ಪ್ಯಾಂಟ್‌ನ ಬಲ ಕಿಸೆಯಲ್ಲಿ ಇಟ್ಟುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ32 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಹಣವನ್ನು ಕಿಸೆಯಲ್ಲಿಟ್ಟು, ತಕ್ಷಣವೇ ಆರೋಪಿಯಾದ ನೀನು ನಿನ್ನ ಬೈಕಿನಲ್ಲಿ ತಾಲೂಕು ಪಂಚಾಯತಿ ಕಚೇರಿ ಆವರಣದಿಂದ ಹೊರಗಡೆ ಹೊರಟು ಹೋಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ33 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಷ್ಟರಲ್ಲಿ ಫಿರ್ಯಾದುದಾರರು ಕರವಸ್ತ್ರದಿಂದ ತನ್ನ ಮುಖ ಒರೆಸಿಕೊಂಡು ಉಪಾಧೀಕ್ಷಕರಿಗೆ ಸನ್ನೆ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ34 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನ್ನನ್ನು ಹುಡುಕಲು ಇಡೀ ಕುಮಟಾ ಪೂರ್ತಿ ತಾವೆಲ್ಲಾ ಲೋಕಾಯುಕ್ತ ಜೀಪಿನಲ್ಲಿ ಹೋಗಿದ್ದು, ಕೊನೆಯದಾಗಿ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ಆರೋಪಿ ನೀನು ಸಿಕ್ಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ35 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿ ಉಪಾಧೀಕ್ಷಕರು ಮತ್ತು ಅವರ ಸಿಬ್ಬಂದಿ ಆರೋಪಿಯಾದ ನಿನ್ನನ್ನು ಹಿಡಿದ ತಕ್ಷಣ ನಿನ್ನ ಪ್ಯಾಂಟಿನ ಬಲಜೇಬಿನಿಂದ ಹಣ ತೆಗೆದು ಅಲ್ಲಿ ಇದ್ದ ಗಿಡಗಂಟೆ ಇರುವ ಜಾಗದಲ್ಲಿ ಆ ಹಣವನ್ನು ಬಿಸಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ36 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಉಪಾಧೀಕ್ಷಕರು ಅವರ ಪರಿಚಯವನ್ನು ಆರೋಪಿಯಾದ ನಿನಗೆ ಹೇಳಿ, ನೀನು ಹಣ ಬಿಸಾಡಿದ್ದ ಜಾಗ ತೋರಿಸುವಂತೆ ಕೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ37 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ಅಲ್ಲಿ ಛಾಯಾ ಚಿತ್ರಗಳನ್ನೆಲ್ಲಾ ತೆಗೆಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ38 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಆ ರೀತಿ ಹಣ ಎಸೆದ ಜಾಗಕ್ಕೆ ತಾವೆಲ್ಲಾ ಹೋಗಲಾಗಿ, ಅಲ್ಲಿ ಕತ್ತಲೆಯಾಗಿದ್ದರಿಂದ ಮತ್ತು ರಸ್ತೆ ಕಿರುದಾಗಿದ್ದರಿಂದ ಜನ ಸಂದಣಿ ಇದ್ದುದ್ದರಿಂದ ಅಲ್ಲಿ ಪಂಚನಾಮೆ ಮಾಡಲು ಸಾಧ್ಯವಾಗಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ39 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಅಲ್ಲಿ ಬಿಸಾಡಿದ್ದ ಹಣವನ್ನು ತೋರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ40 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಹಣವನ್ನು ತಾನೇ ಹೋಗಿ ಎತ್ತಿಕೊಂಡು ಎಣಿಸಿದಾಗ ಅದು ರೂ. 3,000/– ಇತ್ತು ಮತ್ತು ಆ ನೋಟುಗಳು ತಾಳೆ ಆಗಿದ್ದವು ಮತ್ತು ಆ ನೋಟುಗಳನ್ನು ಉಪಾಧೀಕ್ಷಕರು ಜಪ್ತಿ ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ41 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಅಲ್ಲಿಂದ ಆರೋಪಿಯಾದ ನಿನ್ನನ್ನು ಕರೆದುಕೊಂಡು ತಾವು ಕುಮಟಾದ ಪ್ರವಾಸಿ ಮಂದಿರಕ್ಕೆ ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ42 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪ್ರವಾಸಿ ಮಂದಿರದಲ್ಲಿ ಆರೋಪಿಯಾದ ನಿನ್ನ ಎರಡೂ ಕೈ ಬೆರಳುಗಳನ್ನು ಸೋಡಿಯಂ

ಕಾರ್ಬೋನೇಟ್ ದ್ರಾವಣ ತಯಾರಿಸಿ, ಅದರಲ್ಲಿ ಪ್ರತ್ಯೇಕವಾಗಿ ಬಲಗೈ ಬೆರಳು ಮತ್ತು ಎಡಗೈ ಬೆರಳನ್ನು ಅದ್ದಿಸಿದಾಗ ಎರಡೂ ಕೈ ಅದ್ದಿದ ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ43 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ದ್ರಾವಣವನ್ನು ಪ್ರತ್ಯೇಕವಾಗಿ ಎರಡು ಬಾಟಲುಗಳಲ್ಲಿ ಹಾಕಿ ಸೀಲು ಮಾಡಿ, ಅದಕ್ಕೆ ಅಂಟಿಸಿದ ಚೀಟಿಗಳಿಗೆ ತಾನು ರುಜು ಮಾಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ44 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಉಪಾಧೀಕ್ಷಕರಿಗೆ ಫಿರ್ಯಾದುದಾರರು ತನ್ನಿಂದ ಸಾಲ ಪಡೆದಿದ್ದರು ಮತ್ತು ಆ ಹಣವನ್ನು ವಾಪಸ್ಸು ಮಾಡಿದರು ಎಂದು ಲಿಖಿತವಾಗಿ ವಿವರಣೆಯನ್ನು ನೀಡಿದ್ದು, ಸದರಿ ಲಿಖಿತ ವಿವರಣೆಯನ್ನು ಉಪಾಧೀಕ್ಷಕರು ತಮಗೆ ಓದಿ ಹೇಳಿದಾಗ ತಾವು ಪಂಚರು ಅದಕ್ಕೆ ರುಜು ಮಾಡಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ45 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಉಪಾಧೀಕ್ಷಕರಿಗೆ ಮೌಖಿಕವಾಗಿ ಆರೋಪಿ ನೀನು ಹಣ ತೆಗೆದುಕೊಂಡಿದ್ದು ನಿಜ ಇದೆ ಮತ್ತು ತಾನು ಅದನ್ನು ನೋಡಿದ್ದೇನೆ ಎಂದು ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ46 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನ್ನ ಕಚೇರಿಯಲ್ಲಿ ಫಿರ್ಯಾದುದಾರರಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿ, ಜಪ್ತು ಮಾಡುವುದಕ್ಕಾಗಿ ನಿನ್ನ ಕಚೇರಿಗೆ ವಾಪಸ್ಸು ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:47 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿ ಆರೋಪಿಯಾದ ನಿನ್ನ ಮೇಲಾಧಿಕಾರಿ ಬಂದಾಗ, ಅವರಿಗೆ ಲೋಕಾಯುಕ್ತ ಉಪಾಧೀಕ್ಷಕರು ಪ್ರಕರಣದ ವಿಚಾರವನ್ನೆಲ್ಲಾ ವಿವರಿಸಿ ಹೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಗೊತ್ತಿಲ್ಲ.

ಪ್ರಶ್ನೆ:48 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನೀನು ಫಿರ್ಯಾದುದಾರರಿಗೆ ಸಂಬಂಧಪಟ್ಟ ದಾಖಲಾತಿಗಳನ್ನೆಲ್ಲಾ ಹಾಜರು ಪಡಿಸಿದಾಗ, ಆ ಮೂಲ ದಾಖಲಾತಿಗಳನ್ನು ಫಿರ್ಯಾದುದಾರರ ಕೈಗೆ ಕೊಟ್ಟು, ಅದರ ನೆರಳಚ್ಚು ಪ್ರತಿಗಳನ್ನು ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:49 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೂಲ ದಾಖಲಾತಿಗಳನ್ನು ಬಹುಶಃ ಕಚೇರಿಯಲ್ಲಿ ಅಧಿಕಾರಿಯವರಿಗೆ ಮುಂದಿನ ಕ್ರಮಕ್ಕೆ ಕೊಟ್ಟಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:50 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾವು ಪ್ರವಾಸಿ ಮಂದಿರಕ್ಕೆ ವಾಪಸ್ಸು ಬಂದಿದ್ದು, ಅಲ್ಲಿ ಬೆರಳಚ್ಚು ಮಾಡಿ ಪಂಚನಾಮೆಯನ್ನು ತಯಾರಿಸಿ, ಆ ಪಂಚನಾಮೆಗೆ ತಾವು ಸಹಿ ಮಾಡಿದೆವು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:51 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಕಾರವಾರಕ್ಕೆ ಉಪಾಧೀಕ್ಷಕರು, ಪಂಚರು, ಆರೋಪಿ, ಫಿರ್ಯಾದಿ ವಾಪಸ್ಸು ಬಂದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:52 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಲೋಕಾಯುಕ್ತ ಜೀಪಿನಲ್ಲಿ ತನ್ನನ್ನು ವಾಪಸ್ಸು ಲೋಕಾಯುಕ್ತ ಠಾಣೆ ಬಳಿ

ಬಿಟ್ಟಿರುತ್ತಾರೆ ಮತ್ತು ತಾವೆಲ್ಲರೂ ಸೇರಿ ಅಲ್ಲಿಗೆ ಬಂದಿರುತ್ತೇವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ53 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನನ್ನು ಲೋಕಾಯುಕ್ತ ಪೊಲೀಸ್ ನವರು ವಶಕ್ಕೆ ತೆಗೆದುಕೊಂಡರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ54 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ದಿನ ಲೋಕಾಯುಕ್ತ ಕಚೇರಿಯಲ್ಲಿ ಫಿನಾಪ್ತಲಿನ್ ಪುಡಿ ಸವರಿ ಫಿರ್ಯಾದುದಾರರಿಗೆ ನೀಡಿದ ಮತ್ತು ನಂತರ ಫಿರ್ಯಾದುದಾರರಿಂದ ಆರೋಪಿಯಾದ ನೀನು ಸ್ವೀಕರಿಸಿದ ನಂತರ ಆರೋಪಿಯಾದ ನಿನ್ನ ಕಡೆಯಿಂದ ಜಪ್ತು ಮಾಡಿದ ಹಣವನ್ನು ಸಾಕ್ಷಿ ಗುರುತಿಸುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ55 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸಾಕ್ಷಿ ಸ್ವತಃ ಹೇಳುತ್ತಾರೆ ಕುಮಟಾದ ಪ್ರವಾಸಿ ಮಂದಿರದಲ್ಲಿ ಪಂಚನಾಮೆ ಕಾಲದಲ್ಲಿ ಆರೋಪಿಯಾದ ನಿನಗೆ ಬೇರೆ ಪ್ಯಾಂಟು ನೀಡಿ ನೀನು ಧರಿಸಿದ್ದ ಪ್ಯಾಂಟನ್ನು ತೆಗೆಸಿ, ಅದರ ಬಲಕಿಸೆಯ ಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ಸ್ವಲ್ಪ ಗುಲಾಬಿ ಬಣ್ಣಕ್ಕೆ ತಿರುಗಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ56 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಪ್ಯಾಂಟನ್ನು ಸಹ ಲೋಕಾಯುಕ್ತ ಪೊಲೀಸ್ ನವರು ಸೀಲು ಮಾಡಿ ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ57 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ವಾಪಸ್ಸು ಲೋಕಾಯುಕ್ತ ಕಚೇರಿಗೆ ಬಂದ ಮೇಲೆ ಅಲ್ಲಿಂದ ಮನೆಗೆ ಹೋಗಿರುತ್ತೇನೆಂದು

ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ58 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪುನಃ ದಿನಾಂಕಃ 04.12.2013 ರಂದು ತನಗೆ ಸ್ಥಳದ ನಕಾಶೆ ತಯಾರು ಮಾಡಬೇಕಾಗಿದೆ ಎಂದು ಲೋಕೋಪಯೋಗಿ ಇಲಾಖೆಯ ಅಭಿಯಂತರರು ಎಂ .ವಿ. ಹೆಗಡೆ ರವರ ಜೊತೆ ಕರೆದುಕೊಂಡು ಹೋಗಿ ಅಲ್ಲಿ ಜಾಗದ ನಕಾಶೆ ತಯಾರಿಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ59 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 08.01.2014 ರಂದು ಪುನಃ ಲೋಕಾಯುಕ್ತ ಕಚೇರಿಗೆ ಕರೆಯಿಸಿ ವೈಸ್ ರೆಕಾರ್ಡರಿನಲ್ಲಿ ಆಗಿದ್ದ ಧ್ವನಿ ಮುದ್ರಣದಲ್ಲಿ ಗದ್ದಲ ಜಾಸ್ತಿ ಇದ್ದುದ್ದರಿಂದ ಫಿರ್ಯಾದುದಾರರು ಮೊಬೈಲ್ ಫೋನ್ ನಲ್ಲಿ ಮಾಡಿಕೊಂಡಿದ್ದ ರೆಕಾರ್ಡಿಂಗನ್ನು ಸಿ.ಡಿ.ಗೆ ಪರಿವರ್ತಿಸಿ ಅದರಲ್ಲಿದ್ದ ಸಂಭಾಷಣೆಯನ್ನು ಕೇಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ60 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸಿ.ಡಿ.ಯನ್ನು ಜಪ್ತು ಮಾಡಿ, ಅದರಲ್ಲಿದ್ದ ಸಂಭಾಷಣೆಯನ್ನು ಬೆರಳಚ್ಚು ಮಾಡಿಸಿ, ಅದಕ್ಕೆ ತನ್ನ ರುಜುವನ್ನು ಪಡೆದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ61 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ-1 ಪ್ರಾಯೋಗಿಕ ಪಂಚನಾಮೆ ಆಗಿದ್ದು, ನಿಪಿ-2 ಟ್ರ್ಯಾಪ್ ಪಂಚನಾಮೆ ಆಗಿದ್ದು ಎಂದು ಸಾಕ್ಷಿಯು ಸದರಿ ದಾಖಲಾತಿಯ ಕೊನೆ ಪುಟದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ62 ದೋಸಾ-2/ಫ್ರಾಸಾ-1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ-3

ಫಿರ್ಯಾದನ್ನು ತನಗೆ ಓದಿ ಹೇಳಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ63 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ–4 ದಾಖಲಾತಿ ಸಿ.ಡಿ. ಜಪ್ತು ಮಾಡಿದಾಗ ಬರೆದ ಪಂಚನಾಮೆಯಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ64 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ–5 ಆರೋಪಿಯಾದ ನೀನು ಉಪಾಧೀಕ್ಷಕರಿಗೆ ನೀಡಿದ ಲಿಖಿತ ವಿವರಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ನಾನು ಲಿಖಿತ ವಿವರಣೆ ಕೊಟ್ಟಿಲ್ಲ.

ಪ್ರಶ್ನೆಃ65 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಲೋಕಾಯುಕ್ತ ಕಛೇರಿಯಲ್ಲಿ ನಿಪಿ–6 ರಿಂದ 18 ರಂತೆ ಒಟ್ಟೂ 13 ಛಾಯಾ ಚಿತ್ರಗಳನ್ನು ತೆಗೆಯಲಾಗಿರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ66 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಟ್ರ್ಯಾಪ್ ಪಂಚನಾಮೆ ಕಾಲದಲ್ಲಿ ಕುಮಟಾದಲ್ಲಿ ಒಟ್ಟೂ 18 ಛಾಯಾ ಚಿತ್ರಗಳನ್ನು ನಿಪಿ–19 ರಿಂದ 36 ರಂತೆ ತೆಗೆಯಲಾಗಿದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ67 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೊಹರು ಮಾಡಿದ ಲಕೋಟೆಯನ್ನು ಅದಕ್ಕೆ ಹಾಕಿರುವ ಮೊಹರು ಸುಸ್ಥಿತಿಯಲ್ಲಿರುವುದನ್ನು ಆರೋಪಿ ಪರ ವಕೀಲರ ಸಮಕ್ಷಮದಲ್ಲಿ ಖಾತ್ರಿ ಮಾಡಿಕೊಂಡು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿರುತ್ತದೆ ಮತ್ತು ಅದರಲ್ಲಿ ಜಪ್ತು ಮಾಡಿರುವ ಹಣ ಇರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ68 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ರೂ. 3,000/– ನೋಟುಗಳನ್ನು ನೋಡಿದ್ದು, ಅದರಲ್ಲಿ ರೂ. 1,000/– ಎರಡು ಮತ್ತು ರೂ. 500/– ರ ಎರಡು ನೋಟು ಇದ್ದು, ಅವುಗಳು ಆರೋಪಿಯಾದ ನಿನ್ನ ಕಡೆಯಿಂದ ಕುಮಟಾದಲ್ಲಿ ಟ್ರ್ಯಾಪ್ ಸಮಯದಲ್ಲಿ ಜಪ್ತು ಮಾಡಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ69 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮು.ಮಾ–1 ಆರೋಪಿಯಾದ ನಿನಗೆ ಫಿರ್ಯಾದಿ ಕೊಟ್ಟಿದ್ದ ನೋಟು ಆಗಿರುತ್ತವೆ ಎಂದು ಸಾಕ್ಷಿ ಸದರಿ ನೋಟುಗಳನ್ನು ನೋಡಿ ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ70 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಂಚನಾಮೆ ಸಮಯಗಳಲ್ಲಿ ಜಪ್ತು ಮಾಡಿರುವ ದ್ರಾವಣದ ಬಾಟಲುಗಳನ್ನು ಗುರುತಿಸುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ71 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರ್ಟಿಕಲ್ ನಂ. 1 ಲಕೋಟೆಗೆ ಅಂಟಿಸಿರುವ ಚೀಟಿಯಲ್ಲಿ ತನ್ನ ರುಜು ಇದ್ದು, ಅದರಲ್ಲಿ ಮಾದರಿಗಾಗಿ ತೆಗೆದ ಮು.ಮಾ–2 ಫಿನಾಪ್ತಲಿನ್ ಪುಡಿ ಇದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ72 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಬಾಟಲ್ ಮೇಲೆ ಇರುವ ಚೀಟಿಯಲ್ಲಿ ತನ್ನ ರುಜು ಇದ್ದು, ಮು.ಮಾ–3 ಡಿಸ್ಟಿಲ್ಡ್ ವಾಟರನ್ನು ಮಾದರಿಗಾಗಿ ಅದರಲ್ಲಿ ಅಮಾನತ್ತು ಮಾಡಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ73 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೊಹರು ಆಗಿರುವ

ಮು.ಮಾ–4 ಲಕೋಟೆಯಲ್ಲಿ ಮಾದರಿಗಾಗಿ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಜಪ್ತು ಮಾಡಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ74 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಬಾಟಲ್ ನಲ್ಲಿ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿಯಿಂದ ತಯಾರಿಸಿದ ಬಣ್ಣ ರಹಿತ ದ್ರಾವಣದಿಂದ ಮಾದರಿಯನ್ನು ಮು.ಮಾ–5 ರಂತೆ ಸಂಗ್ರಹಿಸಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ75 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಬಾಟಲ್‌ನಲ್ಲಿ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ತಾನು ಫಿನಾಪ್ತಲಿನ್ ಪುಡಿ ಹಚ್ಚಿದ ನೋಟುಗಳನ್ನು ಎಣಿಸಿದ ಮೇಲೆ ತನ್ನ ಎರಡೂ ಕೈ ಬೆರಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ76 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮು.ಮಾ–7 ಮತ್ತು 8 ಎರಡು ಮೊಹರಾದ ಬಾಟಲುಗಳಲ್ಲಿ ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಆರೋಪಿಯಾದ ನಿನ್ನ ಬಲಗೈ ಬೆರಳು ಮತ್ತು ಎಡಗೈ ಬೆರಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿದಾಗ ಅದನ್ನು ಪ್ರತ್ಯೇಕವಾಗಿ ಜಪ್ತು ಮಾಡಿರುವುದು ಆಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ77 ದೋಸಾ–2/ಪ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮತ್ತೊಂದು ಮೊಹರಾದ ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿ ಜಪ್ತು ಮಾಡಿರುವ

ಆರ್ಟಿಕಲ್ ಸಂ. 9(ಎ) ಗೆ ಹಾಕಿರುವ ಮೊಹರು ಸುಸ್ಥಿತಿಯಲ್ಲಿರುವುದನ್ನು ಆರೋಪಿ ಪರ ನ್ಯಾಯವಾದಿಗಳ ಸಮಕ್ಷಮದಲ್ಲಿ ಖಾತ್ರಿ ಪಡಿಸಿಕೊಂಡು ತೆರೆಯಲಾಗಿರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:78 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರ ಮೇಲೆ ಒಂದು ಚೀಟಿ ಅಂಟಿಸಲಾಗಿದ್ದು, ಅದರಿಂದ ತೆಗೆದ ಪ್ಯಾಂಟನ್ನು ಸಾಕ್ಷಿ ನೋಡಿ ಅದು ಆರೋಪಿಯಾದ ನೀನು ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಧರಿಸಿದ್ದ ಮತ್ತು ನಿನ್ನಿಂದ ಅದನ್ನು ತೆಗೆಸಿ ಅಮಾನತ್ತು ಪಡಿಸಿದ ಪ್ಯಾಂಟ್ ಆಗಿದೆ ಎಂದು ಮು.ಮಾ–9 ಅನ್ನು ಗುರುತಿಸಿದ್ದಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:79 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೊಹರಾದ ಬಾಟಲಿನಲ್ಲಿ ಆರೋಪಿಯಾದ ನಿನ್ನ ಪ್ಯಾಂಟಿನ ಬಲಬದಿ ಕಿಸೆಯ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿದ್ದನ್ನು ಸಂಗ್ರಹಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:80 ದೋಸಾ–2/ಫ್ರಾಸಾ–1 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೊಹರಾದ ಲಕೋಟೆಯಲ್ಲಿ ಫಿರ್ಯಾದುದಾರರು ಅವರ ಮೊಬೈಲ್ ನಿಂದ ಆರೋಪಿಯಾದ ನಿನ್ನ ಮೊಬೈಲ್ ಗೆ ಕರೆ ಮಾಡಿದಾಗ ನಡೆಸಿದ ಸಂಭಾಷಣೆಯನ್ನು ಧ್ವನಿ ಮುದ್ರಣ ಮಾಡಿಕೊಂಡಿದ್ದು, ಅದನ್ನು ಸಿ.ಡಿ. ಯಾಗಿ ಪರಿವರ್ತಿಸಿದ ಮು.ಮಾ–11 ಸಿ.ಡಿ.ಆಗಿದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:81 **ದೋಸಾ–3/ಫ್ರಾಸಾ–2 ದಿವಾಕರ ಮಲ್ಲಾರಾವ್ ಕುಲಕರ್ಣಿ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು 2011 ರಿಂದ 2014 ರವರಿಗೆ ಕಾರವಾರದಲ್ಲಿ ಹೆಸ್ಕಾಂ ಕಚೇರಿಯಲ್ಲಿ ಕಿರಿಯ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ

ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ82 ದೋಸಾ-3/ಪ್ರಾಸಾ-2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 16.09.2013 ರಂದು ತಮ್ಮ ಕಚೇರಿಗೆ ಲೋಕಾಯುಕ್ತ ಕಚೇರಿಯಿಂದ ಪಂಚರನ್ನಾಗಿ ಯಾರನ್ನಾದರೂ ಕಳುಹಿಸುವಂತೆ ಪತ್ರ ಬಂದಿತ್ತು, ತಮ್ಮ ಕಚೇರಿಯ ಹಿರಿಯ ಸಹಾಯಕರು ತನಗೆ ಪಂಚ ಸಾಕ್ಷಿಯಾಗಿ ಲೋಕಾಯುಕ್ತ ಕಚೇರಿಗೆ ಹೋಗುವಂತೆ ನಿರ್ದೇಶಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ83 ದೋಸಾ-3/ಪ್ರಾಸಾ-2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಅಲ್ಲಿಗೆ ಹೋದಾಗ ದರ್ಶನ ನಾಯ್ಕ (ಪ್ರಾಸಾ-1) ರವರು ಪಂಚರಾಗಿ ಸೇಲ್ಸ್ ಟ್ಯಾಕ್ಸ್ ಇಲಾಖೆಯಿಂದ ಬಂದಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ84 ದೋಸಾ-3/ಪ್ರಾಸಾ-2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿ ಫಿರ್ಯಾದುದಾರ ಮೊದಲೇ ಹಾಜರು ಇದ್ದ, ಅಲ್ಲಿ ಸುಮಾರು ಜನ ಲೋಕಾಯುಕ್ತ ಸಿಬ್ಬಂದಿ ಮತ್ತು ಲೋಕಾಯುಕ್ತ ಉಪಾಧೀಕ್ಷಕರು ಸಹ ಇದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ85 ದೋಸಾ-3/ಪ್ರಾಸಾ-2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ರಾಮಾ ನಾಯ್ಕ ಎಂಬುವವರು ಫಿರ್ಯಾದನ್ನು ನೀಡಿದ್ದಾರೆ, ಗಣೇಶ ನಾಯ್ಕ ವಿರುದ್ಧ ಆತನು ಲಂಚ ಕೇಳಿದ್ದಾನೆ ಎಂದು ದೂರು ನೀಡಿದ್ದಾರೆ ಎಂದು ಉಪಾಧೀಕ್ಷಕರು ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ86 ದೋಸಾ-3/ಪ್ರಾಸಾ-2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ರೂ. 5,000/- ಅನ್ನು ಅವರು ಕೇಳಿದ್ದು, ನಂತರ ರೂ. 3,000/- ಕೊಡುವಂತೆ ಕೇಳಿರುತ್ತಾರೆ

ಎಂದು ತಿಳಿಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ87 ದೋಸಾ–3/ಪ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ದೂರನ್ನು ಉಪಾಧೀಕ್ಷಕರು ಓದಿ ಹೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ88 ದೋಸಾ–3/ಪ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಅಲ್ಲಿ ಹಾಜರಿದ್ದ ಫಿರ್ಯಾದುದಾರ ರಾಮಾ ನಾಯ್ಕ ಲಂಚಕ್ಕಾಗಿ ಕೊಡಬೇಕಾದ ರೂ. 3,000/– ಅನ್ನು ಹಾಜರು ಪಡಿಸಿದ್ದು, ನಂತರ ಆ ಹಣವನ್ನು ಪಂಚ ಒಂದುರವರಿಗೆ ಕೊಟ್ಟರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ89 ದೋಸಾ–3/ಪ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಪಂಚ ಎರಡು ಎಂದು ಹೇಳಿದರು ಮತ್ತು ಆ ಹಣದಲ್ಲಿ ರೂ. 1,000/– ಎರಡು ನೋಟು ಮತ್ತು ರೂ. 500/–ರ ಎರಡು ನೋಟು ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ90 ದೋಸಾ–3/ಪ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ನೋಟುಗಳನ್ನು ಪಂಚ ಒಂದು ರವರು ಎಣಿಸಿ ಆ ನೋಟುಗಳ ಸಂಖ್ಯೆಗಳನ್ನು ಬರೆದುಕೊಂಡರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ91 ದೋಸಾ–3/ಪ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ನಡವಳಿಕೆ ಆಗುತ್ತಿದ್ದಂತೆ ಅದನ್ನೆಲ್ಲಾ ಲೋಕಾಯುಕ್ತ ಪೊಲೀಸ್ ನವರು ಬರೆದುಕೊಳ್ಳುತ್ತಿದ್ದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ92 ದೋಸಾ–3/ಪ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ನೋಟುಗಳಿಗೆ ಪಂಚ ಒಂದುರವರಿಂದ ರಾಸಾಯನಿಕ ಪುಡಿಯನ್ನು ಲೇಪನ ಮಾಡಿಸಿ, ನಂತರ

ಆ ಹಣವನ್ನು ಒಂದು ಲಕೋಟೆಯಲ್ಲಿ ಇರಿಸಿದ ನಂತರ ಅದನ್ನು ಪಂಚ ಒಂದುರವರ ಕಡೆಯಿಂದ ಫಿರ್ಯಾದುದಾರರ ಅಂಗಿಯ ಮೇಲಿನ ಕಿಸೆಯಲ್ಲಿ ಇರಿಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ93 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಂಚ ಒಂದುರವರ ಎರಡೂ ಕೈ ಬೆರಳುಗಳನ್ನು ಮತ್ತೊಂದು ರಾಸಾಯನಿಕ ದ್ರವದಲ್ಲಿ ಅದ್ದಿಸಿದಾಗ ಆ ದ್ರವ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ94 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆಗ ಉಪಾಧೀಕ್ಷಕರು ಆ ರಾಸಾಯನಿಕ ಪ್ರಕ್ರಿಯೆ ಬಗ್ಗೆ ತಮಗೆ ವಿವರಿಸಿ ಹೇಳಿದರು ಮತ್ತು ಆ ಬಗ್ಗೆ ಪಂಚನಾಮೆ ಬರೆದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ95 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಬಣ್ಣ ತಿರುಗಿದ ದ್ರವವನ್ನು ಒಂದು ಬಾಟಲಿಯಲ್ಲಿ ಸಂಗ್ರಹಿಸಿ ಮೊಹರು ಹಾಕಿ ಜಪ್ತು ಮಾಡಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ96 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಎರಡು ರಾಸಾಯನಿಕಗಳ ಮಾದರಿಯನ್ನು ಬೇರೆ ಬೇರೆ ಎರಡು ಲಕೋಟೆಗಳಲ್ಲಿ ಮೊಹರು ಮಾಡಿ ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ97 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಮಧ್ಯಾಹ್ನ ಅದೇ ದಿನ ತಮ್ಮನ್ನು ಲೋಕಾಯುಕ್ತ ವಾಹನದಲ್ಲಿ ಕುಮಟಾಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಯಾವುದೋ ಪ್ರೌಢಶಾಲೆಯ ವೃತ್ತದ ಬಳಿ ವಾಹನ

ನಿಲ್ಲಿಸಿದ್ದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ98 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿಂದ ಪಂಚ – 1ರವರನ್ನು, ಉಪಾಧೀಕ್ಷಕರು ಮತ್ತು ಅವರ ಸಿಬ್ಬಂದಿ ಕರೆದುಕೊಂಡು ತಾಲೂಕು ಪಂಚಾಯತಿ ಕಚೇರಿಗೆ ಹೋದರು ಮತ್ತು ಫಿರ್ಯಾದಿ ಸಹ ಅವರ ಜೊತೆ ಹೋದನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ99 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆದರೆ ಆರೋಪಿ ಗಣೇಶ ನಾಯ್ಕ ಲಂಚದ ಹಣ ಸ್ವೀಕರಿಸಿದ ಮೇಲೆ ತಕ್ಷಣ ಸಿಗಲಿಲ್ಲ, ನೀನು ನಿನ್ನ ಬೈಕಿನಲ್ಲಿ ಹೊರಟು ಹೋದ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ100 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಯಾವುದೋ ದೇವಸ್ಥಾನದ ಬಳಿ ಕುಮಟಾದಲ್ಲಿ ಸಿಕ್ಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ101 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾವು ಆರೋಪಿಯಾದ ನಿನ್ನ ಸಮೀಪ ಹೋಗುತ್ತಿದ್ದ ಹಾಗೆ ನೀನು ನಿನ್ನ ಕಿಸೆಯಿಂದ ಹಣವನ್ನು ತೆಗೆದು ಗಿಡಗಂಟಿಯಲ್ಲಿ ಕತ್ತಲೆಯಲ್ಲಿ ಎಸೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ102 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತನ್ನನ್ನು, ಪಂಚ–1ರವರನ್ನು ಉಪಾಧೀಕ್ಷಕರು ಕರೆದುಕೊಂಡು ಹೋಗಿ ಅದನ್ನು ತೋರಿಸಿ, ಅಲ್ಲಿ ಬಿದ್ದಿದ್ದ ಹಣದ ನೋಟುಗಳನ್ನು ಪಂಚ–1ರವರ ಕಡೆಯಿಂದ ಎತ್ತಿಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:103 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಮತ್ತು ಪಂಚ–1 ದರ್ಶನ ರವರು ತಾವು ಹಿಂದೆ ಬರೆದುಕೊಂಡಿದ್ದ ನೋಟುಗಳ ಸಂಖ್ಯೆ ಜೊತೆ ಈ ನೋಟುಗಳ ಜೊತೆ ತಾಳೆ ಮಾಡಿದಾಗ ಅವು ತಾಳೆಯಾದವು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:104 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾಳೆಯಾದ ತಕ್ಷಣ ಉಪಾಧೀಕ್ಷಕರು ಆ ನೋಟುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಒಂದು ಲಕೋಟೆಯಲ್ಲಿ ಹಾಕಿ ಮೊಹರು ಹಾಕಿ ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:105 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಮತ್ತು ಪಂಚ–1 ರವರು ಆ ಲಕೋಟೆ ಮೇಲೆ ಅಂಟಿಸಿದ ಚೀಟಿಗೆ ರುಜು ಮಾಡಿದೆವು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:106 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫಿರ್ಯಾದುದಾರರು ಆರೋಪಿಯಾದ ನಿನ್ನನ್ನು ಗಣೇಶ ನಾಯ್ಕ ಎಂದು ತಮಗೆ ಪರಿಚಯ ಹೇಳಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:107 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಕಟಕಟೆಯಲ್ಲಿರುವ ಆರೋಪಿ ಅದೇ ಆರೋಪಿ ಗಣೇಶ ನಾಯ್ಕ ಆಗಿರುತ್ತಾನೆಂದು ಸಾಕ್ಷಿ ನಿನ್ನನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:108 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿ ಕತ್ತಲೆ ಇದ್ದುದ್ದರಿಂದ ಆರೋಪಿಯಾದ ನಿನ್ನನ್ನು, ತಮ್ಮನ್ನು ಉಪಾಧೀಕ್ಷಕರು ಕುಮಟಾದ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋದಾಗ ಫಿರ್ಯಾದುದಾರರು ತಮ್ಮ

ಜೊತೆ ಇದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ109 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನನ್ನು ಹಿಡಿದುಕೊಂಡು ಕುಮಟಾ ಪ್ರವಾಸಿ ಮಂದಿರಕ್ಕೆ ಬಂದಾಗ ತಮ್ಮ ಜೊತೆಯಲ್ಲಿ ಫಿರ್ಯಾದುದಾರರ, ಉಪಾಧೀಕ್ಷಕರು ಮತ್ತು ಸಿಬ್ಬಂದಿ ಇದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ110 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಕುಮಟಾ ಪ್ರವಾಸಿ ಮಂದಿರದಲ್ಲಿ ಆರೋಪಿಯಾದ ನಿನ್ನ ಕೈ ಬೆರಳುಗಳನ್ನು ರಾಸಾಯನಿಕ ದ್ರಾವಣ ತಯಾರಿಸಿ, ಅದರಲ್ಲಿ ಮೊದಲು ಬಲಗೈ ಬೆರಳನ್ನು ಮತ್ತು ಬೇರೆ ಬಟ್ಟಲಿನ ದ್ರಾವಣದಲ್ಲಿ ಎಡಗೈ ಬೆರಳನ್ನು ಅದ್ದಿ ತೊಳೆದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ111 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಎರಡೂ ಬಟ್ಟಲಿನಲ್ಲಿ ಬಣ್ಣ ರಹಿತ ದ್ರಾವಣದಲ್ಲಿ ಕೈ ಬೆರಳುಗಳನ್ನು ಅದ್ದಿದ ಮೇಲೆ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ112 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಬೇರೆ ಬೇರೆ ಬಾಟಲಿಯಲ್ಲಿ ಆ ದ್ರಾವಣವನ್ನು ಹಾಕಿ ಮೊಹರು ಹಾಕಿ ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ113 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನಗೆ ಬೇರೆ ಪ್ಯಾಂಟು ನೀಡಿ, ನೀನು ಧರಿಸಿದ್ದ ಪ್ಯಾಂಟನ್ನು ಪಡೆದು, ಆ ಪ್ಯಾಂಟಿನ ಬಲ ಕಿಸೆಯನ್ನು ಮತ್ತೊಂದು ಬಟ್ಟಲಿನಲ್ಲಿ ತಯಾರಿಸಿದ್ದ ದ್ರಾವಣದಲ್ಲಿ ಅದ್ದಿ ತೊಳೆದಾಗ, ಆ ಬಣ್ಣ ರಹಿತ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ

ತಿರುಗಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ114 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನಿಂದ ಉಪಾಧೀಕ್ಷಕರು ಒಂದು ಲಿಖಿತ ಹೇಳಿಕೆಯನ್ನು ಪಡೆದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಒತ್ತಾಯದಿಂದ ನನ್ನ ಲಿಖಿತ ಹೇಳಿಕೆಯನ್ನು ಬರೆಸಿಕೊಂಡರು. ಅವರು 11 ಜನ ಪೊಲೀಸನವರು ಇದ್ದರು, ನಾನು ಒಬ್ಬನೇ ಇದ್ದೆ.

ಪ್ರಶ್ನೆಃ115 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿ ನಡೆದ ನಡಾವಳಿ ಬಗ್ಗೆ ಪಂಚನಾಮೆಯನ್ನು ತಯಾರಿಸಿ, ತಾನು, ಫ್ರಾಸಾ–1 ರವರು ಮತ್ತು ಉಪಾಧೀಕ್ಷಕರು ಸಹ ಅದಕ್ಕೆ ರುಜು ಮಾಡಿರುತ್ತೇವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ116 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಇದಾದ ಕೆಲವು ದಿನಗಳ ಬಳಿಕ ತಾನು ಪುನಃ ಲೋಕಾಯುಕ್ತ ಕಚೇರಿಗೆ ಹೋಗಿದ್ದಾಗ ಅಲ್ಲಿ ಉಪಾಧೀಕ್ಷಕರು, ಫಿರ್ಯಾದುದಾರ ಮತ್ತು ಪಂಚ–1 ರವರು ಹಾಜರಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ117 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಲೋಕಾಯುಕ್ತ ಕಛೇರಿಯಲ್ಲಿ ಹಚ್ಚಿದ ಒಂದು ಸಿ.ಡಿ.ಯನ್ನು ಜಪ್ತು ಮಾಡಿ, ಅದಕ್ಕೆ ತನ್ನ ರುಜುವನ್ನು ಪಡೆದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ118 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಲೋಕಾಯುಕ್ತ ಕಛೇರಿಯಲ್ಲಿ ಒಂದು ಪಂಚನಾಮೆಯನ್ನು ಮಾಡಿ, ಅದಕ್ಕೆ ತನ್ನ ರುಜುವನ್ನು ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ119 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮು.ಮಾ–1 ರಿಂದ 11 ಫ್ರಾಯೋಗಿಕ ಪಂಚನಾಮೆ ಮತ್ತು ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಲೋಕಾಯುಕ್ತ ಪೊಲೀಸ್ ನವರು ಜಪ್ತು ಮಾಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ120 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಬಾಟಲುಗಳಲ್ಲಿರುವ ಧ್ರಾವಣ ಯಾವುದು ಎಂಬುದನ್ನು ಪಂಚನಾಮೆಯಲ್ಲಿ ವಿವರವಾಗಿ ಬರೆದಿದ್ದಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ121 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ–1 ದಾಖಲಾತಿ ಫ್ರಾಯೋಗಿಕ ಪಂಚನಾಮೆಯಾಗಿದ್ದು, ನಿಪಿ–2 ದಾಖಲಾತಿ ಟ್ರ್ಯಾಪ್ ಪಂಚನಾಮೆಯಾಗಿದ್ದು, ನಿ.ಪಿ–3 ಪಿರ್ಯಾದುದಾರರು ಸಲ್ಲಿಸಿದ ದೂರು ಆಗಿದ್ದು, ನಿ.ಪಿ–4 ಜಪ್ತು ಪಂಚನಾಮೆ ಆಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ122 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿ.ಪಿ–5 ಆರೋಪಿಯಾದ ನೀನು ಉಪಾಧೀಕ್ಷಕರಿಗೆ ನೀಡಿದ ಲಿಖಿತ ವಿವರಣೆಯಾಗಿದೆ ಮತ್ತು ಅದರಲ್ಲಿ ಪ್ರತಿ ಪುಟದಲ್ಲಿ ತಾನು ರುಜು ಮಾಡಿದ್ದೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ123 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿ.ಪಿ–6 ರಿಂದ 18 ಫ್ರಾಯೋಗಿಕ ಪಂಚನಾಮೆ ಸಮಯದಲ್ಲಿ ತೆಗೆದ ಛಾಯಾ ಚಿತ್ರಗಳಾಗಿವೆ. ಮತ್ತು ಅದರಲ್ಲಿ ಪ್ರತಿ ಪುಟದಲ್ಲಿ ತನ್ನ ರುಜು ಇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ124 ದೋಸಾ–3/ಫ್ರಾಸಾ–2 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿ.ಪಿ–19 ರಿಂದ

36 ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ತೆಗೆದ ಛಾಯಾ ಚಿತ್ರಗಳು ಆಗಿವೆ ಮತ್ತು ಅದರಲ್ಲಿ ಪ್ರತಿ ಪುಟದಲ್ಲಿ ತನ್ನ ರುಜು ಇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ125 **ದೋಸಾ–1/ಫ್ರಾಸಾ–3 ರಾಮಾ ಬೀರಪ್ಪ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ,** ನ್ಯಾಯಾಲಯದ ಕಟಕಟೆಯಲ್ಲಿರುವ ಆರೋಪಿಯಾದ ನಿನ್ನ ಗುರುತು ತನಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ126 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು 2013 ಕ್ಕೆ 8–10 ವರ್ಷ ಹಿಂದಿನಿಂದ ಕುಮಟಾ ತಾಲೂಕಿನ 241 ಶಾಲೆಗಳಿಗೆ ಆಹಾರ ಹಾಗೂ ಹಾಲನ್ನು ಸರಬರಾಜು ಮಾಡುತ್ತಿದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು, 2013 ರ ಸೆಪ್ಟೆಂಬರ್ ನಂತರ ಕ್ಷಿರಭಾಗ್ಯ ಯೋಜನೆ ಬಂದಿರುತ್ತದೆ ಅದಕ್ಕೆ ಮೊದಲು ಇರಲಿಲ್ಲ.

ಪ್ರಶ್ನೆಃ127 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಸರಬರಾಜು ಮಾಡುತ್ತಿದ್ದ ಆಹಾರ ಮತ್ತು ಹಾಲಿನ ಬಿಲ್ಲನ್ನು ಸರ್ಕಾರ ಖಜಾನೆ ಮೂಲಕ ತನಗೆ ಪಾವತಿ ಮಾಡುತ್ತಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ128 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಅಕ್ಷರ ದಾಸೋಹ ಕಚೇರಿಯಲ್ಲಿ ಕುಮಟಾದಲ್ಲಿ ನಿರ್ದೇಶಕರು ಆಗಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ129 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, 2013 ರಲ್ಲಿ ಸರ್ಕಾರ ಹೊಸ ಆದೇಶ ಮಾಡಿ ಕೆ.ಎಂ.ಎಫ್ ಧಾರವಾಡದಿಂದ ಹಾಲನ್ನು ಶಾಲೆಗಳಿಗೆ ಸರಬರಾಜು ಮಾಡುವಂತೆ ಆದೇಶಿಸಿತು ಮತ್ತು ಅದನ್ನು ಸರಬರಾಜು ಮಾಡಲು ತನಗೆ ವಹಿಸಿದ್ದರೆಂದು ಮತ್ತು ಹಾಲಿ ಸರಬರಾಜು ಮಾಡುತ್ತಿದ್ದವರಿಗೆ

ಕೆ.ಎಂ.ಎಫ್ ಧಾರವಾಡದಿಂದ ಹಾಲನ್ನು ಸರಬರಾಜು ಮಾಡಲು ನಿರ್ದೇಶನ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ130 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಆ ಪ್ರಕಾರ ಕೆ.ಎಂ.ಎಫ್ ಧಾರವಾಡದಿಂದ ಹಾಲನ್ನು ಪಡೆದು ತಾನು ವಿತರಕನಾಗಿ ತನ್ನ ಸಾರಿಗೆ ವ್ಯವಸ್ಥೆ ಮೂಲಕ ಅದನ್ನು ತಾಲೂಕಿನ ಶಾಲೆಗಳಿಗೆ ಸರಬರಾಜು ಮಾಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ131 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರ ಬಿಲ್ಲನ್ನು ತಾನು ತಾಲೂಕು ಪಂಚಾಯತಿ ಕಚೇರಿಗೆ ಸಲ್ಲಿಸಿದಾಗ ನ್ಯಾಯಾಲಯದಲ್ಲಿರುವ ಆರೋಪಿ ನೀನು ಆ ಬಿಲ್ಲನ್ನು ಪಾವತಿಸಲು ಆಗುವುದಿಲ್ಲ ಎಂದು ತನಗೆ ಹಾರಿಕೆ ಉತ್ತರ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ132 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಕುಮಟಾದ ತಾಲೂಕು ಪಂಚಾಯತಿ ಕಚೇರಿಯಲ್ಲಿ ಅಕ್ಷರ ದಾಸೋಹ ವಿಭಾಗದಲ್ಲಿ ಆಗ ಕಾರ್ಯ ನಿರ್ವಹಿಸುತ್ತಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಹೌದು.

ಪ್ರಶ್ನೆಃ133 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಸಲ್ಲಿಸಿದ್ದ ಬಿಲ್ಲು ಸುಮಾರು ರೂ. 40,000/- ಆಗಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ134 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ತಾನು ಹಾಲು ಸರಬರಾಜು ಮಾಡಿದ ಬಗ್ಗೆ ದೃಢೀಕರಣ ಪತ್ರ ನೀಡಿದ ಮೇಲೆ ಧಾರವಾಡದ ಕೆ.ಎಂ.ಎಫ್ ರವರು ತನಗೆ ಹಣ ಪಾವತಿ ಮಾಡುತ್ತಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ135 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆದರೆ ಆರೋಪಿಯಾದ ನೀನು ದೃಢೀಕರಣ ನೀಡಲು ಒಪ್ಪಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ136 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ದೃಢೀಕರಣ ನೀಡಲು ತನ್ನ ಬಳಿ ರೂ. 5000/– ಲಂಚವನ್ನು ಕೊಡುವಂತೆ ಒತ್ತಾಯಿಸಿದ್ದು, ತನ್ನ ಬಳಿ ಲಂಚದ ಹಣ ಕೊಡಲು ಹಣ ಇರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ137 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಧಾರವಾಡದ ಕೆಎಂಎಫ್ ನಿಂದ ಹಣ ಬರಲಿ ನಂತರ ಆರೋಪಿಯಾದ ನೀನು ಕೇಳಿರುವ ಹಣವನ್ನು ನಿನಗೆ ಕೊಡುವುದಾಗಿ ತಿಳಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ138 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ನೀನು ಹಾಗೆ ಆಗುವುದಿಲ್ಲ ಮೊದಲೇ ಹಣ ಕೊಡಬೇಕು ಎಂದು ಒತ್ತಾಯಿಸಿದ್ದು, ತನಗೆ ಹಣ ಕೊಡುವ ಮನಸ್ಸು ಇರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ139 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಐದು ಸಾವಿರ ಕೊಡಲು ಆಗುವುದಿಲ್ಲ ಮೂರು ಸಾವಿರ ಕೊಡುತ್ತೇನೆಂದು ಚೌಕಶಿ ಮಾಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ140 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತನಗೆ ಹಣ ಕೊಡಲು ಮನಸ್ಸು ಇಲ್ಲದಿದ್ದ ಕಾರಣ ಕಾರವಾರದ ಲೋಕಾಯುಕ್ತ ಅಧಿಕಾರಿಗೆ

ತಿಳಿಸಿದಾಗ ಲೋಕಾಯುಕ್ತ ಅಧಿಕಾರಿಯವರು ಯೋಚನೆ ಮಾಡಿ ದೂರು ಕೊಡಿ, ಮೊದಲು ದೂರು ಕೊಡಲು ಬರುತ್ತಿರಿ, ನಂತರ ನೀವು ಅದರಲ್ಲಿ ಆಸಕ್ತಿ ತೋರಿಸುವುದಿಲ್ಲ ಎಂದು ಹೇಳಿದಾಗ, ತಾನು ದೂರು ತೆಗೆದುಕೊಳ್ಳುವುದಿಲ್ಲ ಎನ್ನುವುದಾದರೆ ಆ ರೀತಿ ಬರೆದುಕೊಡಿ ತಾನು ಹೋಗುತ್ತೇನೆ ಎಂದು ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ141 ದೋಸಾ-1/ಪ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರು ಇಬ್ಬರು ಪಂಚರನ್ನು ಕರೆಸುವಂತೆ ಅಲ್ಲಿ ಇದ್ದ ಉಪ ನಿರೀಕ್ಷಕರಿಗೆ ಹೇಳಿದ್ದು, ಅದಕ್ಕೆ ಪೂರ್ವದಲ್ಲಿ ತನ್ನ ದೂರನ್ನು ತೆಗೆದುಕೊಂಡರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ142 ದೋಸಾ-1/ಪ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫೋನ್‌ನಲ್ಲಿ ಆರೋಪಿ ನಿನ್ನ ಜೊತೆ ಮಾತನಾಡುವಂತೆ ತನಗೆ ಹೇಳಿದಾಗ ತಾನು ಆರೋಪಿ ಜೊತೆ ಮಾತನಾಡಿದೆ ಮತ್ತು ಆರಕ್ಷಕ ಉಪಾಧೀಕ್ಷಕರಿಗೆ ತಾನು ಫೋನನ್ನು ಕೊಟ್ಟಾಗ ಅವರು ಫೋನ್ ನಲ್ಲಿ ವಾಯ್ಸ ರೆಕಾರ್ಡರ್ ನ್ನು ಚಾಲು ಮಾಡಿದರು ಮತ್ತು ತನಗೆ ಮಾತನಾಡಲು ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ143 ದೋಸಾ-1/ಪ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಫೋನ್ ನಲ್ಲಿ ಆರೋಪಿಯಾದ ನಿನ್ನ ಜೊತೆ ತನ್ನ ಕೆಲಸದ ಬಗ್ಗೆ ಮಾತನಾಡಿದಾಗ ಆರೋಪಿ ನೀನು ಹಣ ತಂದುಕೊಡಿ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ144 ದೋಸಾ-1/ಪ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ-3 ರಂತೆ ದೂರನ್ನು ತಾನು ಕೊಟ್ಟಿದ್ದು, ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ145 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದೂರನ್ನು ಕೊಟ್ಟ ಕೂಡಲೇ ಅವರು ಇಬ್ಬರು ಸರ್ಕಾರಿ ಪಂಚರನ್ನು ಕರೆಯಿಸಿ, ಅವರ ಹೆಸರು ದರ್ಶನ ಮತ್ತು ಇನ್ನೊಬ್ಬರ ಹೆಸರು ಏನು ಎಂದರೆ ಸಾಕ್ಷಿಯು ಮಾಂಜ್ರೇಕರ ಇರಬಹುದು ಎಂದು ನುಡಿದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ146 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಪ್ರಯೋಗ ಪ್ರಾರಂಭಿಸಿದರು ಮತ್ತು ತನ್ನ ಬಳಿಯಿಂದ ರೂ. 3000/– ಹಣವನ್ನು ಹಾಜರುಪಡಿಸಿಕೊಂಡರು ಮತ್ತು ಅದರಲ್ಲಿ ರೂ. 2000/– ದ ಒಂದು ನೋಟು ಮತ್ತು ರೂ. 500/– ರ ಎರಡು ನೋಟು ಇತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ147 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟುಗಳಿಗೆ ಸೋಡಿಯಂ ಕಾರ್ಬೋನೇಟ್ ಪುಡಿ ಹಚ್ಚಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ148 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ರೀತಿ ಪುಡಿ ಹಚ್ಚಿದ ಹಣ ಮುಟ್ಟಿದ ಮೇಲೆ ಕೈಯನ್ನು ದ್ರಾವಣದಲ್ಲಿ ಅದ್ದಿದರೆ ದ್ರಾವಣ ಕೆಂಪಾಗುತ್ತದೆ ಎಂದು ಹೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ149 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರಕ್ಷಕ ಉಪಾಧೀಕ್ಷಕರು ಮತ್ತು ಪಂಚರು ತಾನು ಕೊಟ್ಟ ಹಣವನ್ನು ಎಣಿಸಿದರು ಮತ್ತು ಪುಡಿ ಹಚ್ಚಿದ ಮೇಲೆ ಆ ಹಣವನ್ನು ಪಂಚ ಸಾಕ್ಷಿ ಎಣಿಸಿದರು ಮತ್ತು ಆ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ150 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪುಡಿ ಹಚ್ಚಿದ ಹಣವನ್ನು ಒಂದು ಲಕೋಟೆಯಲ್ಲಿ ಹಾಕಿದರು ಮತ್ತು ಆ ಹಣವನ್ನು ಪದೇ ಪದೇ ಮುಟ್ಟ ಬೇಡಿ ಎಂದು ಹೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ151 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನ ಬಳಿ ಹೋದಾಗ ಮಾತ್ರ ಆ ಹಣವನ್ನು ಮುಟ್ಟಬೇಕು, ಅಲ್ಲಿಯವರೆಗೆ ಮುಟ್ಟಬಾರದು ಎಂದು ಆರಕ್ಷಕ ಉಪಾಧೀಕ್ಷಕರು ತನಗೆ ಹೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ152 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಮ್ಮ ಎಲ್ಲರ ಕೈಗಳನ್ನು ನೀರಿನಲ್ಲಿ ಕೊನೆಯಲ್ಲಿ ತೊಳೆಸಿದರು ಮತ್ತು ಪಂಚರ ಮತ್ತು ತನ್ನ ಕೈಗಳನ್ನು ಪ್ರತ್ಯೇಕವಾಗಿ ತೊಳೆಸಿದಾಗ ಬಣ್ಣ ಇಲ್ಲದ ನೀರಿನಂತಿದ್ದ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು ಮತ್ತು ತನ್ನ ಕೈ ತೊಳೆಸಿದಾಗ ಸಹ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ153 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಒಂದು ಬಾಟಲಿಯಲ್ಲಿ ತುಂಬಿದರು ಮತ್ತು ಅದಕ್ಕೆ ಎ ಎಂಬ ಅಕ್ಷರದ ಮೊಹರು ಹಾಕಿ ಸೀಲು ಮಾಡಿ ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ154 ದೋಸಾ-1/ಫ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ-13 ಛಾಯಾಚಿತ್ರದಲ್ಲಿ ತಾನು ಇದ್ದೇನೆ ಮತ್ತು ಅದರಲ್ಲಿ ತನ್ನ ಕಿಸೆಯಲ್ಲಿ ಲೋಕಾಯುಕ್ತ ಕಚೇರಿಯ ಸಿಬ್ಬಂದಿ ಯಾರೋ ಆ ನೋಟುಗಳನ್ನು

ಇಡುತ್ತಿದ್ದಾರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ155 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ–12, 14 ರಿಂದ 18 ಛಾಯಾಚಿತ್ರಗಳನ್ನು ಸಹ ಲೋಕಾಯುಕ್ತ ಕಚೇರಿಯಲ್ಲಿ ಆಗ ತೆಗೆದಿದ್ದಾರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ156 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಟ್ರ್ಯಾಪ್ ಸಮಯದಲ್ಲಿ ಸಹ ಛಾಯಾಚಿತ್ರ ತೆಗೆದಿದ್ದಾರೆ ಎಂದು ಸಾಕ್ಷಿ ಸ್ವತಃ ನುಡಿದಿದ್ದಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ157 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮು.ಮಾ–3 ಮತ್ತು 5 ಬಾಟಲಿಯಲ್ಲಿ ದ್ರಾವಣವನ್ನು ಆಗ ಜಪ್ತು ಮಾಡಿದ್ದಾರೆ ಎಂದು ಸಾಕ್ಷಿ ಗುರುತಿಸಿರುತ್ತಾರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ158 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಲೋಕಾಯುಕ್ತ ಪೊಲೀಸ್ ರ ಇಲಾಖಾ ವಾಹನದಲ್ಲಿ ತನ್ನನ್ನು ಕುಳ್ಳಿರಿಸಿಕೊಂಡರು ಮತ್ತು ತಾವು ಆಗ ಸುಮಾರು 8 ಜನ ಇದ್ದೆವು ಮತ್ತು ಅವರ ಪೈಕಿ ಇಬ್ಬರು ಪಂಚರು, ಆರಕ್ಷಕ ಉಪಾಧೀಕ್ಷಕರು, ಆರಕ್ಷಕ ಉಪ ನಿರೀಕ್ಷಕರು, ಆರಕ್ಷಕ ಪೇದೆ ಪಟಗಾರ ಎನ್ನುವವರು ಇದ್ದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ159 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ವಾಹನದಲ್ಲಿ ಹೋಗುವುದಕ್ಕೆ ಮೊದಲು ಪದೇ ಪದೇ ಹಣವನ್ನು ಮುಟ್ಟಬೇಡಿ ಎಂದು ತನಗೆ ಸೂಚನೆ ಕೊಟ್ಟರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ160 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ವಾಯ್ಸು

ರೆಕಾರ್ಡರ್ ಅನ್ನು ತನಗೆ ಕೊಟ್ಟರೆಂದು ಮತ್ತು ಆರೋಪಿಯಾದ ನಿನ್ನ ಬಳಿ ಹೋಗುವಾಗ ಮಾತ್ರ ಅದನ್ನು ಚಾಲು ಮಾಡಿ ಇಟ್ಟುಕೊಳ್ಳಬೇಕು ಎಂದು ಹೇಳಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ161 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನ ಬಳಿ ತಾನು ಮಾತನಾಡಿದಾಗ ಆರೋಪಿ ಕೇಳಿದರೆ ಮಾತ್ರ ತನಗೆ ವಹಿಸಿದ್ದ ಹಣವನ್ನು ಆರೋಪಿಗೆ ಕೊಡಬೇಕು ಎಂದು ಹೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ162 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಕುಮಟಾಗೆ ಹೋದಾಗ ಗಿಬ್ಸ್ ಹೈಸ್ಕೂಲ್ ಬಳಿ ವಾಹನ ನಿಲ್ಲಿಸಿದರು ಮತ್ತು ತನ್ನನ್ನು ಅಲ್ಲಿಂದ ಆರೋಪಿಯಾದ ನಿನ್ನ ಕಚೇರಿಗೆ ಹೋಗಲು ಹೇಳಿದರು ಮತ್ತು ತನ್ನ ಜೊತೆ ಒಬ್ಬ ಸಾಕ್ಷಿಯನ್ನು ಕಳುಹಿಸಿದರೆಂದು ಮತ್ತು ಅಲ್ಲಿಗೆ ಹೋದಾಗ ಸಂಜೆ 6.15 ಗಂಟೆಯಾಗಿತ್ತೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ163 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತನ್ನ ಜೊತೆ ಬಂದ ಒಬ್ಬ ಪಂಚ ತನ್ನ ಹಿಂದೆ ಹಿಂಬಾಲಿಸಿ ಬಂದು ನಿಂತಿದ್ದರು ಮತ್ತು ದೂರ ಹೊರಗಡೆ ನಿಂತುಕೊಂಡು ತಾನು ಆರೋಪಿಯಾದ ನಿನ್ನ ಜೊತೆ ಮಾತನಾಡುವುದನ್ನು ಕೇಳುತ್ತಿದ್ದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ164 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಆರೋಪಿಯಾದ ನಿನ್ನ ಬಳಿ ಹೋದಾಗ ಆರೋಪಿ ನೀನು ಹಣವನ್ನು ಕೊಡುವುದು ಬೇಡ ಹೊರಗೆ ಹೋಗಿ ಎಂದು ಹೇಳಿದ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ165 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ

ಆರೋಪಿಯಾದ ನೀನು ನಿನ್ನ ಕಚೇರಿಯ ಹೊರಗೆ ಕಚೇರಿ ಆವರಣದಲ್ಲಿ ಇದ್ದ ಬೈಕ್ ಸ್ಟ್ಯಾಂಡ್ ಬಳಿ ಬಂದು, ಅಲ್ಲಿ ಆರೋಪಿಯಾದ ನೀನು ಹಣ ಕೊಡುವಂತೆ ಕೇಳಿದ್ದು, ತಾನು ಆರೋಪಿ ಕೇಳಿದಂತೆ ರೂ. 3000/- ಪುಡಿ ಹಾಕಿಕೊಟ್ಟಿದ್ದ ಲಂಚದ ಹಣವನ್ನು ಕೊಟ್ಟಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ166 ದೋಸಾ-1/ಪ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀನು ಆ ಹಣವನ್ನು ತೆಗೆದುಕೊಂಡು ಎಣಿಸಿಕೊಂಡು ಇಟ್ಟುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ167 ದೋಸಾ-1/ಪ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಆರಕ್ಷಕ ಉಪಾಧೀಕ್ಷಕರು ಹೇಳಿಕೊಟ್ಟ ರೀತಿ ತನ್ನ ಕರವಸ್ತ್ರ ತೆಗೆದು ಮುಖ ಒರೆಸಿಕೊಂಡು ಸನ್ನೆ ನೀಡಿದ ಆ ಸಮಯಕ್ಕೆ ಆರೋಪಿ ತನ್ನ ಬೈಕ್ ನಲ್ಲಿ ಕುಳಿತು ಬೈಕ್ ಸ್ಟಾರ್ಟ್ ಮಾಡಿಕೊಂಡು ಹೊರಟು ಹೋದ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ168 ದೋಸಾ-1/ಪ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ವೇಳೆಗೆ ಆರಕ್ಷಕ ಉಪಾಧೀಕ್ಷಕರು ಅಲ್ಲಿಗೆ ಬಂದು ತನಗೆ ಬೈದರು ಹಾಗೂ ತಾವೆಲ್ಲಾ ಆರೋಪಿಯಾದ ನಿನ್ನನ್ನು ಆರಕ್ಷಕ ಉಪಾಧೀಕ್ಷಕರು ಮತ್ತು ಕೆಲವು ಸಿಬ್ಬಂದಿ ಅವರ ಜೀಪಿನಲ್ಲಿ ಹಿಂಬಾಲಿಸಿಕೊಂಡು ಹೋದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ169 ದೋಸಾ-1/ಪ್ರಾಸಾ-3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಹಾಗೂ ತನ್ನ ಜೊತೆ ಇದ್ದ ಇನ್ಸ್ಪೆಕ್ಟರು ಆರಕ್ಷಕ ಉಪನಿರೀಕ್ಷಕರು ತನ್ನ ಎಲ್ ಎಂ ಎಲ್ ಫ್ರಿಡಮ್ ಬೈಕ್ ನಲ್ಲಿ ಹಿಂಬಾಲಿಸಿಕೊಂಡು ಬಂದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ170 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಕಾರವಾರದ ಲೋಕಾಯುಕ್ತ ಕಚೇರಿಗೆ ಬರುವುದಕ್ಕೆ ಮೊದಲೇ ತನ್ನ ಎಲ್ ಎಂ ಎಲ್ ಫ್ರಿಡಮ್ ಬೈಕನ್ನು ಆರೋಪಿಯಾದ ನಿನ್ನ ಕಚೇರಿಯ ಆವರಣದಲ್ಲಿ ನಿಲ್ಲಿಸಿ ಬಂದಿದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ171 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನ್ನನ್ನು ಹಿಂಬಾಲಿಸಿಕೊಂಡು ಹೋದಾಗ ಕುಮಟಾದ ಶಾಂತಿಕಾಂಬಾ ದೇವಸ್ಥಾನ ಇರಬಹುದು ಹೆರವಟ್ಟಾದಲ್ಲಿ ಆ ದೇವಸ್ಥಾನದ ಪ್ರವೇಶ ದ್ವಾರದ ಬಳಿ ಆರೋಪಿ ಸಿಕ್ಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ172 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ನೀನು ಫಿರ್ಯಾದಿಯಿಂದ ಪಡೆದಿದ್ದ ಹಣವನ್ನು ರಸ್ತೆ ಪಕ್ಕದಲ್ಲಿ ಕಂಪೌಂಡ್ ಪಕ್ಕದಲ್ಲಿ ಬೀಸಾಡಿದ್ದ, ಅದನ್ನು ಆರಕ್ಷಕ ಉಪ ನಿರೀಕ್ಷಕರು ನೋಡಿ, ತಕ್ಷಣ ಆ ಹಣವನ್ನು ಮುಟ್ಟಲು ಹೋಗಲಿಲ್ಲ, ಛಾಯಾಗ್ರಾಹಕನನ್ನು ಕರೆಯಿಸಿ, ಅವರಿಂದ ಹಣ ಬೀಸಾಡಿದ್ದ ಜಾಗದಲ್ಲಿ ಹಣದ ಛಾಯಾಚಿತ್ರ ತೆಗೆಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ173 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತನ್ನನ್ನು ಕುಳಿಸಿಕೊಂಡು ಆರೋಪಿಯಾದ ನಿನ್ನನ್ನು ಕರೆದುಕೊಂಡು ಕುಮಟಾದ ಪ್ರವಾಸಿ ಮಂದಿರಕ್ಕೆ ಲೋಕಾಯುಕ್ತ ಪೊಲೀಸ್ ನವರು ಬಂದು, ಪ್ರವಾಸಿ ಮಂದಿರದಲ್ಲಿ ಆರೋಪಿಯಾದ ನಿನ್ನ ಕೈಗಳನ್ನು ಭಟ್ಟಿ ಇಳಿಸಿದ ನೀರಿನಲ್ಲಿ ಏನನ್ನೋ ಹಾಕಿದ್ದರು ಅದು ಬಣ್ಣ ರಹಿತವಾಗಿತ್ತು, ಅದರಲ್ಲಿ ಅದ್ದಿಸಿ ತೊಳೆಸಿದಾಗ ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು ಮತ್ತು ಆ ದ್ರಾವಣವನ್ನು ಬಾಟಲಿಯಲ್ಲಿ ಹಾಕಿ ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ174 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನ ತಮ್ಮನನ್ನು ಕರೆಯಿಸಿ ನಿನಗೆ ಬೇರೆ ಬಟ್ಟೆ ತರಿಸಿ, ನೀನು ಧರಿಸಿದ್ದ ಪ್ಯಾಂಟನ್ನು ತೆಗೆಸಿ ಜಪ್ತು ಮಾಡಿ, ಆ ಪ್ಯಾಂಟನ್ನು ದ್ರಾವಣದಲ್ಲಿ ತೊಳೆದಾಗ ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು ಮತ್ತು ಆ ದ್ರಾವಣವನ್ನು ಬಾಟಲಿಯಲ್ಲಿ ತೆಗೆದುಕೊಂಡು ಜಪ್ತು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ175 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯನ್ನು ನನ್ನ ಕೆಲಸಕ್ಕೆ ಸಂಬಂಧಪಟ್ಟ ಅಂದರೆ ಕೆಎಂಎಫ್‌ಗೆ ಸಂಬಂಧಪಟ್ಟ ಕಡತವನ್ನು ಕೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ176 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ–2 ಕುಮಟಾದ ಪ್ರವಾಸಿ ಮಂದಿರದಲ್ಲಿ ಬರೆದ ಪಂಚನಾಮೆಯಾಗಿದ್ದು, ನಿಪಿ–38 ಆ ಸಮಯದಲ್ಲಿ ತಯಾರಿಸಿದ ನಕ್ಷೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ177 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮು.ಮಾ–1 ಆ ದಿನ ತಾನು ಹಾಜರುಪಡಿಸಿದ ಮತ್ತು ಆರೋಪಿಯಿಂದ ಜಪ್ತು ಮಾಡಿದ ರೂ. 3000/– ಅನ್ನು ನೋಡಿ ಸಾಕ್ಷಿ ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ178 ದೋಸಾ–1/ಪ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯನ್ನು ಕಡತ ಕೇಳಿದಾಗ ಅದು ತಾಲೂಕು ಪಂಚಾಯತಿ ಕಚೇರಿಯಲ್ಲಿ ಇರುವುದಾಗಿ ಪಂಚನಾಮೆ ಸಮಯದಲ್ಲಿ ಹೇಳಿದ, ಆ ವೇಳೆಗೆ ತಾಲೂಕು ಪಂಚಾಯತಿ ಕಚೇರಿ ಬಂದಾಗಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:179 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಲೋಕಾಯುಕ್ತ ಅಧಿಕಾರಿ ತಾಲೂಕು ಪಂಚಾಯತಿ ಕಚೇರಿಯ ಅಧಿಕಾರಿಗಳು ಸಿಬ್ಬಂದಿಗಳನ್ನೆಲ್ಲಾ ಕರೆಸಿದರು ಮತ್ತು ಚಾವಿ ತರಿಸಿ ತಾಲೂಕು ಪಂಚಾಯತಿ ಕಚೇರಿ ಬಾಗಿಲು ತೆರೆಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:180 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿ ಆ ಕಡತ ಅವನ ಬೈಕ್ ನಲ್ಲಿ ಇದೆ ಎಂದು ಹೇಳಿದ್ದು, ಆ ವೇಳೆಗೆ ಆರೋಪಿಯಾದ ನಿನ್ನ ಬೈಕನ್ನು ಪ್ರವಾಸಿ ಮಂದಿರದ ಬಳಿ ತಂದಿದ್ದರು ಮತ್ತು ನಿನ್ನ ಬೈಕ್ ನಲ್ಲಿ ಹಿಂಬದಿ ಬಾಕ್ಸ್ ನಲ್ಲಿ ಕಡತ ಇಟ್ಟಿದ್ದ ಅದನ್ನು ತೆಗೆದು ಹಾಜರುಪಡಿಸಿದ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಗೊತ್ತಿಲ್ಲ.

ಪ್ರಶ್ನೆ:181 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಕಡತದ ಮೂಲ ದಾಖಲಾತಿಯನ್ನು ತಾಲೂಕು ಪಂಚಾಯತಿ ಅಧಿಕಾರಿಗೆ ವಾಪಸ್ಸು ಮಾಡಿದರು ಮತ್ತು ಅದರ ನೆರಳಚ್ಚು ಪ್ರತಿಗಳನ್ನು ಆಗ ಲೋಕಾಯುಕ್ತ ಪೊಲೀಸ್ ನವರು ಪಡೆದಿರಬಹುದೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:182 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ತನಗೆ ಕೊಟ್ಟಿದ್ದ ವಾಯ್ಸು ರೆಕಾರ್ಡರ್ ನ್ನು ವಾಪಸ್ಸು ಲೋಕಾಯುಕ್ತ ಅಧಿಕಾರಿಗೆ ಕೊಟ್ಟೆ , ಅದರಲ್ಲಿ ಏನು ಧ್ವನಿ ಮುದ್ರಣ ಆಗಿಲ್ಲ, ಕಾರಣ ಆರೋಪಿ ತಾನು ಅವನನ್ನು ಅವನ ಕಚೇರಿಯಲ್ಲಿ ಭೇಟಿ ಮಾಡಿದಾಗ ಹೊರಗೆ ಹೋಗಿ ಎಂದು ಬಾಯಿ ಮಾತಿನಲ್ಲಿ ಹೇಳಲಿಲ್ಲ, ಕೈ ಸನ್ನೆಯಿಂದ ಹೇಳಿದ ಹಾಗೂ ಕೈ ಸನ್ನೆಯಿಂದ ಅವನ ಕಚೇರಿಯ ಆವರಣದಲ್ಲಿರುವ ಬೈಕ್ ನಿಲ್ದಾಣದ ಬಳಿ ಬರುವಂತೆ ತನಗೆ ಹೇಳಿದ, ಅಲ್ಲಿ ಹೋದಾಗ ಹಣ ತೆಗೆದುಕೊಂಡ, ಆದ್ದರಿಂದ ವಾಯ್ಸು ರೆಕಾರ್ಡರ್ ನಲ್ಲಿ ಯಾವುದೇ ಸ್ಪಷ್ಟವಾದ ಧ್ವನಿ ಮುದ್ರಣ ಆಗಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:183 ದೋಸಾ–1/ಫ್ರಾಸಾ–3 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ದೂರನ್ನು

ಕೊಡುವಾಗ ಪೋನ್ ನಲ್ಲಿ ಆರೋಪಿ ಜೊತೆ ಆಗಿದ್ದ ಸಂಭಾಷಣೆಯ ಧ್ವನಿ ಮುದ್ರಣವನ್ನು ಸಿ.ಡಿ. ಮಾಡಿ ಲೋಕಾಯುಕ್ತ ಕಚೇರಿಯಲ್ಲಿ ಕೇಳಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ184 **ದೋಸಾ–6/ಫ್ರಾಸಾ–5 ಸದಾನಂದ ನೋನಾ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ,** 2013 ರಿಂದ 2016 ಜೂನ್ ತಿಂಗಳಲ್ಲಿ ತಾನು ನಿವೃತ್ತಿಯಾಗುವವರೆಗೆ ಕರ್ನಾಟಕ ಲೋಕಾಯುಕ್ತ ಕಾರವಾರ ಕಚೇರಿಯಲ್ಲಿ ಆರಕ್ಷಕ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ185 ದೋಸಾ–6/ಫ್ರಾಸಾ–5 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ತಮ್ಮ ಠಾಣೆಯ ಗುನ್ನಾ ಸಂ. 5/2013 ರಲ್ಲಿ ದಿನಾಂಕ 16.09.2013 ರಂದು ಜಪ್ತು ಆಗಿದ್ದ ವಸ್ತು ಸಂ. 1 ರಿಂದ 9(ಎ) ಅನ್ನು ಅದೇ ದಿನ ಧಾರವಾಡದ ರಾಸಾಯನಿಕ ಪರೀಕ್ಷಾ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ186 ದೋಸಾ–6/ಫ್ರಾಸಾ–5 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಜಪ್ತು ಆಗಿದ್ದ ವಸ್ತುಗಳನ್ನು ಧಾರವಾಡದ ರಾಸಾಯನಿಕ ಪರೀಕ್ಷಾ ಪ್ರಯೋಗಾಲಯಕ್ಕೆ ಕೊಟ್ಟು, ಅವರು ಕೊಟ್ಟ ಸ್ವೀಕೃತಿಯನ್ನು ತಂದು ತನಿಖಾಧಿಕಾರಿಯಾದ ಆರಕ್ಷಕ ಉಪಾಧೀಕ್ಷಕರ ಮುಂದೆ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ187 ದೋಸಾ–6/ಫ್ರಾಸಾ–5 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 23.12.2013 ರಂದು ತನಿಖಾಧಿಕಾರಿ ತನ್ನನ್ನು ಧಾರವಾಡದ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಹೋಗಿ ಅಲ್ಲಿಂದ ಮೇಲ್ಕಂಡ ವಸ್ತುಗಳ ಪರೀಕ್ಷೆ ಬಗ್ಗೆ ಪ್ರಮಾಣ ಪತ್ರವನ್ನು ಮತ್ತು ಆ ವಸ್ತುಗಳನ್ನು ವಾಪಸ್ಸು ತರುವಂತೆ ಕಳುಹಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ188 ದೋಸಾ–6/ಪ್ರಾಸಾ–5 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಅದೇ ದಿನ ಹೋಗಿ ಸದರಿ ವಸ್ತುಗಳು ಮತ್ತು ಪ್ರಮಾಣ ಪತ್ರವನ್ನು ಅಲ್ಲಿಂದ ಪಡೆದು ತಂದು ತನಿಖಾಧಿಕಾರಿ ಮುಂದೆ ಹಾಜರುಪಡಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ189 ದೋಸಾ–6/ಪ್ರಾಸಾ–5 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಸದರಿ ವಸ್ತುಗಳನ್ನು ತೆಗೆದುಕೊಂಡು ಹೋದಾಗ ಅವುಗಳಿಗೆ ಹಾಕಿದ್ದ ಮೊಹರು ಮತ್ತು ಅವುಗಳನ್ನು ವಾಪಸ್ಸು ತಂದಾಗ ರಾಸಾಯನಿಕ ಪರೀಕ್ಷಾ ಕೇಂದ್ರದವರು ಹಾಕಿದ್ದ ಮೊಹರು ಸುಸ್ಥಿತಿಯಲ್ಲಿ ಇತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ190 ದೋಸಾ–6/ಪ್ರಾಸಾ–5 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮು.ಮಾ–2 ರಿಂದ 10 ತಾನು ಧಾರವಾಡದ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಿದ್ದ ವಸ್ತುಗಳು ಮತ್ತು ಅಲ್ಲಿಂದ ವಾಪಸ್ಸು ತಂದ ವಸ್ತುಗಳು ಆಗಿವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ191 ದೋಸಾ–6/ಪ್ರಾಸಾ–5 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಜಪ್ತು ಆಗಿದ್ದ ನಗದು ಹಣವನ್ನು ಸಹ ತೆಗೆದುಕೊಂಡು ಹೋಗಿದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ192 **ದೋಸಾ–9/ಪ್ರಾಸಾ–7 ಚಂದನ್ ರಮೇಶ ಮಾಂಜ್ರೇಕರ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು 2008 ರಿಂದ ಲೋಕಾಯುಕ್ತ ಕಚೇರಿ ಕಾರವಾರದಲ್ಲಿ ಆರಕ್ಷಕ ಪೇದೆಯಾಗಿ ಮತ್ತು 2014 ರಿಂದ 2021 ರವರೆಗೆ ಆರಕ್ಷಕ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ193 ದೋಸಾ-9/ಫ್ರಾಸಾ-7 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16.09.2013 ರಂದು ತಾನು ಕಚೇರಿಯಲ್ಲಿದ್ದಾಗ ಈ ಪ್ರಕರಣದ ಫಿರ್ಯಾದಿ ಚಾಸಾ-1 ರವರು ಫಿರ್ಯಾದು ನೀಡಿದ ಮೇರೆಗೆ ತನಿಖಾಧಿಕಾರಿಯಾದ ಆರಕ್ಷಕ ಉಪಾಧೀಕ್ಷಕರು ನೀಡಿದ ಆದೇಶದಂತೆ ತಾನು ಪ್ರಕರಣದಲ್ಲಿ ಪ್ರಾಯೋಗಿಕ ಪಂಚನಾಮೆಯನ್ನು ಲ್ಯಾಪಟಾಪ್ ನಲ್ಲಿ ಕಾರವಾರದ ಲೋಕಾಯುಕ್ತ ಕಚೇರಿಯಲ್ಲಿ ಬೆರಳಚ್ಚು ಮಾಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ194 ದೋಸಾ-9/ಫ್ರಾಸಾ-7 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಟ್ರ್ಯಾಪ್ ಕಾರ್ಯಾಚರಣೆ ಕುರಿತು ಕುಮಟಾಕ್ಕೆ ಹೋದಾಗ ಆರೋಪಿಯು ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಫಿರ್ಯಾದಿಯಿಂದ ಲಂಚದ ಹಣವನ್ನು ಪಡೆದಿರುತ್ತಾನೆ, ಆ ಸಮಯದಲ್ಲಿ ತಾನು ಹಾಜರು ಇದ್ದು ಟ್ರ್ಯಾಪ್ ಪಂಚನಾಮೆಯನ್ನು ಬೆರಳಚ್ಚು ಮಾಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ195 ದೋಸಾ-9/ಫ್ರಾಸಾ-7 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಲಂಚ ಪಡೆದ ಆರೋಪಿ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆಗಿರುತ್ತಾನೆಂದು ನಿನ್ನನ್ನು ಸಾಕ್ಷಿ ನೋಡಿ ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ196 **ದೋಸಾ-8/ಫ್ರಾಸಾ-8 ಸೋಮನಾಥ ರಾಮಾ ನಾಯ್ಕು ಇವರು ತಮ್ಮ ಸಾಕ್ಷ್ಯದಲ್ಲಿ,** ತನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯಾದ ನಿನ್ನ ಪರಿಚಯ ಇದ್ದು, ದಿನಾಂಕ 01.10.2013 ರಂದು ಮೇಲಾಧಿಕಾರಿಯವರ ಆದೇಶದಂತೆ ಮೊಕದ್ದಮೆ ಸಂ. 5/2013 ಕಲಂ 7, 13(ಬಿ) ಮತ್ತು 13(2) ಪಿ ಸಿ ಆ್ಯಕ್ಟ್ 1988 ರಲ್ಲಿ ಜಪ್ತಾದ ವಸ್ತು ಸಂ. 1 ರಿಂದ 9 ನೇಯವುಗಳನ್ನು ರಾಸಾಯನಿಕ ಪರೀಕ್ಷಾ ಕೇಂದ್ರ ಧಾರವಾಡಕ್ಕೆ ನೀಡಲು ತನಗೆ ನೇಮಿಸಿದಂತೆ

ತಾನು ಧಾರವಾಡ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ನೀಡಿ ಸ್ವೀಕೃತಿ ಪತ್ರವನ್ನು ಪಡೆದುಕೊಂಡು ಆರಕ್ಷಕ ಉಪಾಧೀಕ್ಷಕರು, ಲೋಕಾಯುಕ್ತ ಕಾರವಾರರವರ ಮುಂದೆ ಅದೇ ದಿನ ವರದಿ ಮಾಡಿಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ197 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು 2012 ರಿಂದ 2016 ರವರೆಗೆ ಕಾರವಾರ ಕರ್ನಾಟಕ ಲೋಕಾಯುಕ್ತ ಠಾಣೆಯಲ್ಲಿ ಆರಕ್ಷಕ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ198 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16.09.2013 ರಂದು ಠಾಣೆಯಲ್ಲಿದ್ದಾಗ ರಾಮಾ ಬೀರಪ್ಪ ನಾಯ್ಕ ಕುಮಟಾ ಬಾಡ ಎನ್ನುವವರು ಕಾರವಾರದ ಲೋಕಾಯುಕ್ತ ಕಚೇರಿಗೆ ಬಂದು ಆರಕ್ಷಕ ಉಪಾಧೀಕ್ಷಕರಾದ ಚಾಸಾ-17 ರವರ ಮುಂದೆ ಒಂದು ಲಿಖಿತ ಫಿರ್ಯಾದನ್ನು ನೀಡಿದ್ದು, ಅದನ್ನು ಆರಕ್ಷಕ ಉಪಾಧೀಕ್ಷಕರು ಓದಿದ್ದು, ಗುನ್ನಾ ಸಂ. 5/2013 ರಂತೆ ಕಲಂ 7, 13(ಬಿ) ಮತ್ತು 13(2) ಪಿ ಸಿ ಆಕ್ಟ್ 1988 ಪ್ರಕಾರ ಮೊಕದ್ದಮೆ ದಾಖಲು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ199 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆಯಿಸಿದ್ದು, ಆ ಸಮಯದಲ್ಲಿ ಗಣೇಶ ನಾಯ್ಕ ಎಂಬ ಆರೋಪಿ ಫಿರ್ಯಾದುದಾರನಿಂದ ಹಾಲಿನ ಪುಡಿ ವಿತರಣೆ ಬಗ್ಗೆ ಲಂಚ ಕೇಳಿದ ಬಗ್ಗೆ ಅದನ್ನು ಟ್ರ್ಯಾಪ್ ಸಮಯದಲ್ಲಿ ಕೊಡುವುದಕ್ಕಾಗಿ ರೂ. 3,000/- ಹಣವನ್ನು ತಂದಿದ್ದ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ200 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೊಕದ್ದಮೆ ದಾಖಲು ಮಾಡಿದ ಮೇಲೆ ಫಿರ್ಯಾದನ್ನು ಒಂದು ಲಕೋಟೆಯಲ್ಲಿ

ಉಪಾಧೀಕ್ಷಕರು ಹಾಕಿ ಅದನ್ನು ಮುಚ್ಚಿ ನ್ಯಾಯಾಲಯಕ್ಕೆ ಸಲ್ಲಿಸಲು ನ್ಯಾಯಾಲಯದ ಕೆಲಸ ಮಾಡುವ ಆರಕ್ಷಕ ಪೇದೆ ರಾಮದಾಸ ಆಚಾರಿ ಮೂಲಕ ಕಳುಹಿಸಿ, ನಂತರ ಫ್ರಾಯೋಗಿಕ ಪಂಚನಾಮೆಯನ್ನು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ201 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರು ದೋಸಾ–6 ಆರಕ್ಷಕ ಮುಖ್ಯ ಪೇದೆರವರಿಗೆ ಪಿರ್ಯಾದಿ ಹಾಜರುಪಡಿಸಿದ ನೋಟುಗಳಿಗೆ ಎರಡು ಬದಿಗೆ ಪಿನಾಪ್ತಲಿನ್ ಪುಡಿ ಸವರಲು ಸೂಚಿಸಿದಾಗ ಆ ಪುಡಿಯಿಂದ ಸ್ವಲ್ಪ ಪುಡಿಯನ್ನು ಮಾದರಿಗಾಗಿ ಲಕೋಟೆಯಲ್ಲಿ ಹಾಕಿ ಅದನ್ನು ಮುಚ್ಚಿ ಅರಗು ಹಚ್ಚಿ , ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ 1 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ202 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದೋಸಾ–6 ರವರು ಆ ನೋಟುಗಳಿಗೇ ಪಿನಾಪ್ತಲಿನ್ ಪುಡಿಯನ್ನು ಎರಡೂ ಬದಿಗೆ ಸವರಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ203 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಪಂಚ–1 ದರ್ಶನ ನಾಯ್ಕ ಆ ನೋಟುಗಳನ್ನು ಆರಕ್ಷಕ ಉಪಾಧೀಕ್ಷಕರ ಸೂಚನೆಯ ಮೇರೆಗೆ ಎಣಿಸಿದರು ಮತ್ತು ಅದರಲ್ಲಿ ರೂ. 1000 ದ ಎರಡು ನೋಟು ಹಾಗೂ ರೂ. 500/ ರ ಎರಡು ನೋಟು ಇತ್ತು, ಒಟ್ಟು ರೂ. 3000/– ಇತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ204 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತನಗೆ ಸೋಡಿಯಮ್ ಕಾರ್ಬೋನೇಟ್ ದ್ರಾವಣ ಪಿಂಗಾಣಿ ಬಟ್ಟಲಿನಲ್ಲಿ ತಯಾರಿಸಲು ಹೇಳಿದಂತೆ ತಾನು ಒಂದು ಪಿಂಗಾಣಿ ಬಟ್ಟಲಿನಲ್ಲಿ ಬಟ್ಟಿ ಇಳಿಸಿದ ನೀರನ್ನು ಹಾಕಿ

ಅದಕ್ಕೆ ಒಂದು ಚಮಚ ಸೋಡಿಯಮ್ ಕಾರ್ಬೋನೇಟ್ ಪುಡಿ ಹಾಕಿ ದ್ರಾವಣ ತಯಾರಿಸಿ, ಆ ದ್ರಾವಣದಿಂದ ಸ್ವಲ್ಪ ದ್ರಾವಣವನ್ನು ಮಾದರಿಗಾಗಿ ಒಂದು ಕ್ವಾಟರ್ ಬಾಟಲಿನಲ್ಲಿ ಹಾಕಿ, ಮುಚ್ಚಳ ಹಾಕಿ ಬಂದ ಮಾಡಿ, ಅರಗಿನಿಂದ ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ 3 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ205 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆಗ ದ್ರಾವಣ ತಯಾರಿಸಲು ಉಪಯೋಗಿಸಿದ ಭಟ್ಟಿ ಇಳಿಸಿದ ನೀರಿನಲ್ಲಿ ಸ್ವಲ್ಪ ನೀರನ್ನು ಮಾದರಿಗಾಗಿ ಒಂದು ಕ್ವಾಟರ್ ಬಾಟಲಿನಲ್ಲಿ ಹಾಕಿ, ಮುಚ್ಚಳ ಹಾಕಿ ಬಂದ ಮಾಡಿ, ಅರಗಿನಿಂದ ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ 2 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ206 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ದ್ರಾವಣ ತಯಾರಿಸಲು ಉಪಯೋಗಿಸಿದ ಸೋಡಿಯಮ್ ಕಾರ್ಬೋನೇಟ್ ಪುಡಿಯಲ್ಲಿ ಸ್ವಲ್ಪ ಪುಡಿಯನ್ನು ಮಾದರಿಗಾಗಿ ಒಂದು ಲಕೋಟೆಯಲ್ಲಿ ಹಾಕಿ, ಮುಚ್ಚಿ ಅರಗಿನಿಂದ ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ207 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ತಯಾರಿಸಿದ ಸೋಡಿಯಮ ಕಾರ್ಬೋನೇಟ್ ದ್ರಾವಣದಲ್ಲಿ ನೋಟು ಎಣಿಸಿದ ಪಂಚ-1 ರವರ ಕೈ ಬೆರಳುಗಳನ್ನು ಅದ್ದಿಸಿ ತೊಳೆಸಲಾಗಿ, ಆಗ ಬಣ್ಣ ರಹಿತ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿದ್ದನ್ನು ಒಂದು ಬಾಟಲಿಯಲ್ಲಿ ಹಾಕಿ ಮುಚ್ಚಳ ಹಾಕಿ ಬಂದ

ಮಾಡಿ, ಅರಗಿನಿಂದ ಆಂಗ್ಲ ಅಕ್ಷರದಿಂದ ಮೊಹರು ಮಾಡಿ, ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿ ಅದಕ್ಕೆ ವಸ್ತು ಸಂಖ್ಯೆ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ208 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರಕ್ಷಕ ಉಪಾಧೀಕ್ಷಕರು ಪಂಚರು ಮತ್ತು ಪಿರ್ಯಾದಿಗೆ ಸೋಡಿಯಮ್ ಕಾರ್ಬೋನೆಟ್ ದ್ರಾವಣದಲ್ಲಿ ಪಿನಾಪ್ತಲಿನ್ ದ್ರಾವಣವನ್ನು ಮುಟ್ಟಿ ಕೈಯನ್ನು ಅದ್ದಿದರೆ ಆ ಬಣ್ಣ ರಹಿತ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಎಂದು ವಿವರಿಸಿ ಹೇಳಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ209 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಿನಾಪ್ತಲಿನ್ ಪುಡಿ ಹಚ್ಚಿದ ನೋಟುಗಳನ್ನು ಪಂಚ1 ರವರಿಗೆ ಪಿರ್ಯಾದಿಯ ಅಂಗಿಯ ಎಡ ಕಿಸೆಯಲ್ಲಿ ಇಡುವಂತೆ ತಿಳಿಸಿದಂತೆ, ಪಂಚ-1 ದರ್ಶನ್ ನಾಯ್ಕು ರವರು ಪಿನಾಪ್ತಲಿನ್ ಪುಡಿ ಲೇಪನ ಮಾಡಿದ ನೋಟುಗಳನ್ನು ಪಿರ್ಯಾದಿಯ ಅಂಗಿಯ ಎಡಕಿಸೆಯಲ್ಲಿ ಇಟ್ಟರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ210 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟುಗಳನ್ನು ಪದೇ ಪದೇ ಮುಟ್ಟಬಾರದು ಎಂದು ಆರಕ್ಷಕ ಉಪಾಧೀಕ್ಷಕರು ಪಿರ್ಯಾದಿಗೆ ತಿಳಿಸಿದರು ಮತ್ತು ಆರೋಪಿಯಾದ ನಿನ್ನ ಬಳಿ ಹೋದಾಗ ಆರೋಪಿಯು ಕೇಳಿದರೆ ಆ ಪಿನಾಪ್ತಲಿನ್ ಪುಡಿ ಲೇಪನ ಮಾಡಿದ ಹಣವನ್ನು ಆರೋಪಿಗೆ ಕೊಡಬೇಕು ಅಥವಾ ಆರೋಪಿ ಎಲ್ಲಿ ಇಡಲು ಹೇಳುತ್ತಾನೋ ಅಲ್ಲಿ ಇಡಬೇಕು ಎಂದು ಪಿರ್ಯಾದಿಗೆ ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ211 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಜೇಬಿನಲ್ಲಿ

ಇರುವ ಕರವಸ್ತ್ರವನ್ನು ತೆಗೆದು ಸನ್ನೆ ನೀಡಬೇಕೆಂದು ಪಿರ್ಯಾದಿಗೆ ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ212 ದೋಸಾ–8/ಪ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರಕ್ಷಕ ಉಪಾಧೀಕ್ಷಕರು ಪಿರ್ಯಾದಿಗೆ ಒಂದು ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ನೀಡಿದರು ಮತ್ತು ಆರೋಪಿಯಾದ ನಿನ್ನ ಬಳಿ ಹೋದಾಗ ಅದನ್ನು ಚಾಲು ಮಾಡಿ ಇಟ್ಟುಕೊಂಡು ಆರೋಪಿಯಾದ ನಿನ್ನ ಜೊತೆ ಆಗುವ ಮಾತುಕತೆಯನ್ನು ಧ್ವನಿ ಮುದ್ರಣ ಮಾಡಿಕೊಳ್ಳಬೇಕು ಎಂದು ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ213 ದೋಸಾ–8/ಪ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ವಾಯ್ಸ್ ರೆಕಾರ್ಡರನ್ನು ಹೇಗೆ ಉಪಯೋಗಿಸಬೇಕೆಂದು ಆರಕ್ಷಕ ಉಪಾಧೀಕ್ಷಕರು ಪಿರ್ಯಾದಿಗೆ ಮಾಹಿತಿ ನೀಡಿದರು ಮತ್ತು ಪಿರ್ಯಾದಿ ಜೊತೆ ಹೋಗುವಂತೆ ಪಂಚ–1 ರವರಿಗೆ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ214 ದೋಸಾ–8/ಪ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನ ಬಳಿ ಪಿರ್ಯಾದುದಾರ ಹೋದಾಗ ಪಂಚ–1 ರವರು ಸಂಗಡ ಇದ್ದು ವೀಕ್ಷಿಸಬೇಕು ಎಂದು ಪಂಚ–1 ರವರಿಗೆ ತಿಳಿಸಿದರು ಮತ್ತು ಅಲ್ಲಿ ನಡೆಯುವ ಘಟನೆಯನ್ನು ತಮಗೆ ಪಂಚ–1 ರವರು ತಿಳಿಸಬೇಕು ಎಂದು ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ215 ದೋಸಾ–8/ಪ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಜಪ್ತು ಮಾಡಿದ ಮೇಲೆ ಹೇಳಿದ ವಸ್ತುಗಳನ್ನು ಆರಕ್ಷಕ ಉಪಾಧೀಕ್ಷಕರು ಅವರ ವಶಕ್ಕೆ ತೆಗೆದುಕೊಂಡು ಠಾಣೆಯಲ್ಲಿ ಅವರ ಕಪಾಟಿನಲ್ಲಿ ಇಟ್ಟುಕೊಂಡರು ಮತ್ತು ಆರಕ್ಷಕ ಉಪಾಧೀಕ್ಷಕರು ತಮಗೆಲ್ಲರಿಗೂ ಸಾಬೂನಿನಿಂದ ಕೈಗಳನ್ನು ತೊಳೆದುಕೊಳ್ಳಲು ಹೇಳಿದಂತೆ ತಾವೆಲ್ಲರೂ ಅದೇ ಪ್ರಕಾರ ಸಾಬೂನಿನಿಂದ ತಮ್ಮ

ಕೈಗಳನ್ನು ತೊಳೆದುಕೊಂಡೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ216 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮೇಲ್ಕಂಡ ಎಲ್ಲಾ ಪ್ರಕ್ರಿಯೇ ಬಗ್ಗೆ ದೋಸಾ-10 ರವರು ಆರಕ್ಷಕ ಉಪಾಧೀಕ್ಷಕರ ನಿರ್ದೇಶನದ ಪ್ರಕಾರ ಛಾಯಚಿತ್ರಗಳನ್ನು ತೆಗೆದರು ಮತ್ತು ಆರಕ್ಷಕ ಉಪಾಧೀಕ್ಷಕರು ಹೇಳಿದಂತೆ ದೋಸಾ-9 ರವರು ಪ್ರಾಯೋಗಿಕ ಪಂಚನಾಮೆಯನ್ನು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿದರು ಮತ್ತು ಕಾರವಾರದ ಲೋಕಾಯುಕ್ತ ಠಾಣೇಯಲ್ಲಿ ಮಧ್ಯಾಹ್ನ 3.00 ರಿಂದ 4.30 ರವರೆಗೆ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ217 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ನ್ಯಾಯಾಲಯದ ಮುಂದೆ ಆಗ ಜಪ್ತು ಮಾಡಿದ ಮಾದರಿ ಪಿನಾಪ್ತಲಿನ್ ಪುಡಿ ಇರುವ ಲಕೋಟೆ, ಮಾದರಿ ಬಟ್ಟೆ ಇಳಿಸಿದ ನೀರು ಸಂಗ್ರಹಿಸಿರುವ ಬಾಟಲಿ , ಮಾದರಿ ಸೋಡಿಯಮ್ ಕಾರ್ಬೋನೆಟ್ ಪುಡಿ ಇರುವ ಲಕೋಟೆ , ಮಾದರಿ ಸೋಡಿಯಮ್ ಕಾರ್ಬೋನೆಟ್ ಧ್ರಾವಣ ಇರುವ ಬಾಟಲಿ ಹಾಗೂ ಆಗ ಜಪ್ತು ಮಾಡಿದ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾದ ಧ್ರಾವಣ ಸಂಗ್ರಹಿಸಿದ ಬಾಟಲಿ (ಈಗ ಆ ಬಾಟಲಿ ಒಡೆದಿದೆ.) ಅನ್ನು ನ್ಯಾಯಾಲಯದ ಮುಂದೆ ನೋಡಿರುತ್ತೇನೆ ಮತ್ತು ಅವುಗಳನ್ನೇ ಆಗ ಜಪ್ತು ಮಾಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ218 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಅದೇ ದಿನ ಸಂಜೆ 4.35 ಗಂಟೆಗೆ ಕಾರವಾರದ ಲೋಕಾಯುಕ್ತ ಠಾಣೆಯಿಂದ ಎರಡು ಇಲಾಖಾ ವಾಹದಲ್ಲಿ ಆರಕ್ಷಕ ಉಪಾಧೀಕ್ಷಕರು, ಆರಕ್ಷಕ ನಿರೀಕ್ಷಕರು, ತಾನು, ಇತರೆ ಸಿಬ್ಬಂದಿ, ಪಿರ್ಯಾದುದಾರ ಮತ್ತು ಪಂಚರು ಟ್ರಾಪ್ ಕಾರ್ಯಾಚರಣೆಗೆ ಬೇಕಾದ ಸಲಕರಣೆಗಳನ್ನು ತೆಗೆದುಕೊಂಡು ಕುಮಟಾಕ್ಕೆ ಹೋಗಿ, ಸಂಜೆ 6.00 ಗಂಟೆಗೆ ತಾವು ತಲುಪಿ, ಅಲ್ಲಿ ಗಿಬ್ಸ್ ಪೌಢಶಾಲೆ ವೃತ್ತದ ಬಳಿ ವಾಹನಗಳನ್ನು

ಆರಕ್ಷಕ ಉಪಾಧೀಕ್ಷಕರು ನಿಲ್ಲಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ219 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿ ಪಿರ್ಯಾದಿಗೆ ಆಪಾದಿತನಿಗೆ ದೂರವಾಣಿ ಕರೆ ಮಾಡುವಂತೆ ತಿಳಿಸಿದಾಗ ಪಿರ್ಯಾದಿ ಮೊಬೈಲ್ ನಲ್ಲಿ ಆಪಾದಿತನಿಗೆ ಕರೆ ಮಾಡಲಾಗಿ ಆರೋಪಿ ತಾನು ತಾಲೂಕಾ ಪಂಚಾಯತಿ ಕಚೇರಿಯಲ್ಲಿ ಇದ್ದೇನೆ, ಅಲ್ಲಿಗೆ ಬರುವುದು ಎಂದು ಆಪಾದಿತ ಹೇಳಿದ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ220 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರು ತಮ್ಮನೆಲ್ಲಾ ಜೀಪನಿಂದ ಕೆಳಗೆ ಇಳಿಸಿ, ಪಂಚ-1 ಮತ್ತು ಪಿರ್ಯಾದುದಾರನಿಗೆ ತಾಲೂಕು ಪಂಚಾಯತಿ ಕಚೇರಿಗೆ ಹೋಗಲು ಕಳುಹಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ221 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತನಗೆ ಆರಕ್ಷಕ ನಿರೀಕ್ಷಕರು ಹಾಗೂ ಸುದರ್ಶನ್ ನಾಯ್ಕು ಎಂಬ ಆರಕ್ಷಕ ಮುಖ್ಯ ಪೇದೆ ರವರಿಗೆ ಅಲ್ಲಿ ಇದ್ದ ಎ ಒನ್ ಜೆರಾಕ್ಸ ಸೆಂಟರ್ ಬಳಿ ಇದ್ದು ವೀಕ್ಷಿಸುವಂತೆ ಆರಕ್ಷಕ ಉಪಾಧೀಕ್ಷಕರು ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ222 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರಕ್ಷಕ ಉಪಾಧೀಕ್ಷಕರು ಮತ್ತು ಪಂಚ-2 ರವರು ತಾಲುಾಕು ಪಂಚಾಯತಿ ಕಚೇರಿಯ ಉತ್ತರಕ್ಕೆ ಹೋಗುವ ರಸ್ತೆಯಲ್ಲಿ ನಿಂತುಕೊಂಡರು ಮತ್ತು ಪಿರ್ಯಾದುದಾರ ಆಪಾದಿತನ ಬಳಿ ಹೋಗಿ ವಾಪಸ್ಸು ಬರುವಾಗ ಕರವಸ್ತ್ರದಿಂದ ಮುಖ ವರಿಸಿ ಸನ್ನೆ ಮಾಡಿದ ಮೇಲೆ ಅಲ್ಲಿಗೆ ತಾವೆಲ್ಲಾ ಹೋಗುವುದು ಎಂದು ಆರಕ್ಷಕ ಉಪಾಧೀಕ್ಷಕರು ಸೂಚನೆ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ223 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದುದಾರರನ್ನು ಕಳುಹಿಸುವುದಕ್ಕೆ ಮೊದಲು ಅವನಿಗೆ ಕೊಟ್ಟಿದ್ದ ಡಿಜಿಟಲ್ ವಾಯ್ಸು ರೆಕಾರ್ಡರನ್ನು ಚಾಲು ಮಾಡಿ ಇಟ್ಟುಕೊಳ್ಳಲು ಸೂಚಿಸಿದ್ದಾಗಿ ಹಾಗೂ ಆಗ ಸಂಜೆ 6.15 ಗಂಟೆ ಆಗಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ224 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿ ಮತ್ತು ಪಂಚ–1 ರವರು ಆರೋಪಿ ಕಚೇರಿಗೆ ಹೋದ ಮೇಲೆ ತಾವು ಹೊರಗಡೆ ಕಾಯುತ್ತಿದ್ದಾಗ ಪಿರ್ಯಾದಿಯವರು ಸಂಜೆ 6.35 ಗಂಟೆಗೆ ತಾಲೂಕು ಕಚೇರಿಯ ಹೊರಗಡೆ ಬಂದು ಕರವಸ್ತ್ರದಿಂದ ಮುಖ ವರಸಿಕೊಂಡು ಕರವಸ್ತ್ರವನ್ನು ಜಾಡಿಸಿ ಸನ್ನೆ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ225 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ರೀತಿ ಫಿರ್ಯಾದಿ ಕರವಸ್ತ್ರದಿಂದ ಸನ್ನೆ ನೀಡಿದ ನಂತರ ತಾವೆಲ್ಲಾ, ಆರಕ್ಷಕ ಉಪಾಧೀಕ್ಷಕರು, ಪಂಚ–2 ರವರು ಎಲ್ಲಾ ಸೇರಿ ಕಚೇರಿ ಒಳಗೆ ಹೋದಾಗ ಆರೋಪಿಯಾದ ನೀನು ಅಲ್ಲಿಂದ ನಿನ್ನ ಹೀರೋ ಹೊಂಡ ಬೈಕಿನಲ್ಲಿ ಓಡಿ ಹೋದ ಎಂದು ಗೊತ್ತಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ226 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾವು ಕುಮಟಾದಲ್ಲಿ ಎಲ್ಲಾ ತಿರುಗಾಡಿದ ಮೇಲೆ ಹೆರವಟ್ಟಾ ರಸ್ತೆಯಲ್ಲಿ ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆಯ ಮೇಲೆ ಆರೋಪಿಯಾದ ನಿನ್ನನ್ನು ತಡೆದಾಗ ನೀನು ನಿನ್ನ ಪ್ಯಾಂಟ್ ಜೇಬಿನಿಂದ ಹಣವನ್ನು ತೆಗೆದು ಅಲ್ಲಿಯೇ ಗಿಡಗಂಟೆಯಲ್ಲಿ ಬಿಸಾಡಿದ ಆರೋಪಿಯಾದ ನಿನ್ನನ್ನು ಆಗ ತಾನು ನೋಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ227 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದೆ ಕಟಕಟೆಯಲ್ಲಿ ಆ ಆರೋಪಿ ಇದ್ದಾನೆಂದು ಸಾಕ್ಷಿಯು ನ್ಯಾಯಾಲಯದ ಮುಂದೆ ಆರೋಪಿಯಾದ ನಿನ್ನನ್ನು ಗುರುತಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ228 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆಗ ಆರಕ್ಷಕ ಉಪಾಧೀಕ್ಷಕರ ಸೂಚನೆಯ ಮೇರೆಗೆ ಆರೋಪಿಯಾದ ನಿನ್ನ ಕೈಗಳನ್ನು ದೋಸಾ–7 ಮತ್ತು 9 ರವರು ಹಿಡಿದುಕೊಂಡರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ229 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಇದೇ ಆರೋಪಿ ತನ್ನಿಂದ ಲಂಚದ ಹಣವನ್ನು ಪಡೆದದ್ದು ಮತ್ತು ಹೀರೋ ಹೊಂಡ ಬೈಕಿನಲ್ಲಿ ಓಡಿ ಹೋದದ್ದು ಎಂದು ಆಗ ಪಿರ್ಯಾದುದಾರ ಆರೋಪಿಯಾದ ನಿನ್ನನ್ನು ತೋರಿಸಿ ಆರಕ್ಷಕ ಉಪಾಧೀಕ್ಷಕರಿಗೆ ತಿಳಿಸಿದ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ230 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರು ಆರೋಪಿಯಾದ ನಿನಗೆ ಅವರ ಪರಿಚಯ ಹೇಳಿ, ತಾನು ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರು ಎಂದು ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ231 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಂಚ–1 ರವರಿಗೆ ಆರೋಪಿಯಾದ ನೀನು ಅಲ್ಲಿ ಬಿಸಾಡಿದ ನೋಟುಗಳನ್ನು ತೆಗೆದುಕೊಳ್ಳುವಂತೆ ಆರಕ್ಷಕ ಉಪಾಧೀಕ್ಷಕರು ಸೂಚಿಸಿದಾಗ ಪಂಚ–1 ರವರು ಅಲ್ಲಿ ಬಿದ್ದಿದ್ದ ನೋಟುಗಳನ್ನು ತೆಗೆದು ಎಣಿಸಿದರು ಮತ್ತು ಅದು ಪ್ರಾಯೋಗಿಕ

ಪಂಚನಾಮೆಯ ಸಮಯದಲ್ಲಿ ಹಾಜರುಪಡಿಸಿದ ನೋಟುಗಳೇ ಎಂದು ತಿಳಿಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ232 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನ್ನನ್ನು ಆರಕ್ಷಕ ಉಪಾಧೀಕ್ಷಕರು ಕುಮಟಾದ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋದರು, ಕಾರಣ ಆಗ ಸಮಯ ರಾತ್ರಿ 8.40 ಆಗಿತ್ತು ಮತ್ತು ಕತ್ತಲೆ ಇದ್ದು, ಸಾರ್ವಜನಿಕ ರಸ್ತೆ ಆಗಿದ್ದರಿಂದ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋದಾಗ ತಾವೆಲ್ಲರೂ ಆಗ ಕೂಡಿ ಅಲ್ಲಿಗೆ ಹೋದೆವು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ233 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿ ಮತ್ತು ಪಂಚ–1ರವರಿಗೆ ಆರಕ್ಷಕ ಉಪಾಧೀಕ್ಷಕರು ಆರೋಪಿಯಾದ ನಿನ್ನ ಕಚೇರಿಯಲ್ಲಿ ಏನು ನಡೆಯಿತು ಎಂದು ಕೇಳಿದಾಗ ನಡೆದ ವಿಷಯವನ್ನು ಪಿರ್ಯಾದುದಾರ ಮತ್ತು ಪಂಚ–1 ರವರು ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ234 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪ್ರವಾಸಿ ಮಂದಿರದಲ್ಲಿ ಪಂಚನಾಮೆ ಮಾಡಿದರು ಮತ್ತು ಆ ಸಮಯದಲ್ಲಿ ವಶಪಡಿಸಿಕೊಂಡಿದ್ದ ನೋಟುಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿದರು ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ235 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ದೋಸಾ–11 ಮಂಜುನಾಥ ಪಟಗಾರ್ ಆರಕ್ಷಕ ಪೇದೆ ರವರ ಮೂಲಕ ಆರಕ್ಷಕ ಉಪಾಧೀಕ್ಷಕರು ಎರಡು ಪಿಂಗಾಣಿ ಬಟ್ಟಲಿನಲ್ಲಿ ಸೋಡಿಯಮ್ ಕಾರ್ಬೋನೇಟ್ ದ್ರಾವಣವನ್ನು ತಯಾರು ಮಾಡಿಸಿದರೆಂದು ಸಾಕ್ಷ್ಯ

ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ236 ದೋಸಾ–8/ಪ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನ್ನ ಒಂದು ಕೈ ಬೆರಳನ್ನು ಒಂದು ಪಿಂಗಾಣಿ ಬಟ್ಟಲಿನಲ್ಲಿದ್ದ ಧ್ರಾವಣದಲ್ಲಿ ಅದ್ದಿಸಿ ತೊಳೆದಾಗ ಬಣ್ಣ ರಹಿತ ಧ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ237 ದೋಸಾ–8/ಪ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಎರಡು ಗಾಜಿನ ಬಾಟಲಿಯಲ್ಲಿ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ ಧ್ರಾವಣವನ್ನು ಸಂಗ್ರಹಿಸಿ, ಮುಚ್ಚಳ ಹಾಕಿ ಮುಚ್ಚಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ, ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ238 ದೋಸಾ–8/ಪ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನ ಇನ್ನೊಂದು ಕೈ ಬೆರಳನ್ನು ಇನ್ನೊಂದು ಪಿಂಗಾಣಿ ಬಟ್ಟಲಿನಲ್ಲಿದ್ದ ಧ್ರಾವಣದಲ್ಲಿ ಅದ್ದಿಸಿ ತೊಳೆದಾಗ ಬಣ್ಣ ರಹಿತ ಧ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ239 ದೋಸಾ–8/ಪ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಎರಡು ಗಾಜಿನ ಬಾಟಲಿಯಲ್ಲಿ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ ಧ್ರಾವಣವನ್ನು ಸಂಗ್ರಹಿಸಿ, ಮುಚ್ಚಳ ಹಾಕಿ ಮುಚ್ಚಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ, ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

(ಸಾಕ್ಷಿದಾರರ ಹೇಳಿಕೆಗಳ ಬಗ್ಗೆ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಪ್ರಶ್ನೆ ಸಂಖ್ಯೆ 1 ರಿಂದ 239 ರವರೆಗೆ ಓದಿ ಹೇಳಿ ಆರೋಪಿ ಅದಕ್ಕೆ ಕೊಟ್ಟ ಉತ್ತರಗಳನ್ನು ಬೆರಳಚ್ಚುಗಾರರಿಗೆ ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ಮೂಲಕ ಬೆರಳಚ್ಚು ಮಾಡಿಸಿ ಈ ದಿನ ದಿನಾಂಕಃ30-11-2024 ರಂದು ಯಥಾವತ್ತಾಗಿ ನಮೂದಿಸಿಕೊಳ್ಳಲಾಗಿರುತ್ತದೆ ಎಂದು ದೃಢೀಕರಿಸಲಾಗಿದೆ.)

(ಡಿ. ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.

**ಕಲಂ 313 ಸಿ ಆರ್ ಪಿ ಸಿ ಅನ್ವಯ ಆರೋಪಿಯ ಮುಂದುವರಿದ ಹೇಳಿಕೆ**

**ದಿನಾಂಕ 05.12.2024.**

ಪ್ರಶ್ನೆಃ240 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನೀನು ಧರಿಸಿದ್ದ ಪ್ಯಾಂಟ್‌ನ್ನು ಬದಲಾಯಿಸಲು ಆರೋಪಿಯಾದ ನಿನ್ನ ತಮ್ಮ ವಿಟು ಎನ್ನುವವನ್ನು ಆರಕ್ಷಕ ಉಪಾಧೀಕ್ಷಕರು ಕರೆಸಿ, ಒಂದು ಬೇರೆ ಪ್ಯಾಂಟ್‌ನ್ನು ತರಲು ತಿಳಿಸಿದಂತೆ ಅವರು ಬೇರೆ ಪ್ಯಾಂಟ್‌ನ್ನು ತೆಗೆದುಕೊಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ241 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನ್ನ ತಮ್ಮ ತೆಗೆದುಕೊಂಡು ಬಂದಿದ್ದ ಪ್ಯಾಂಟ್‌ನ್ನು ನಿನಗೆ ಕೊಟ್ಟು ನೀನು ಧರಿಸಿದ್ದ ಪ್ಯಾಂಟ್‌ನ್ನು ತೆಗೆಸಿ, ಅದರ ಜೇಬನ್ನು ಮತ್ತೆ ದೋಸಾ-11 ರವರಿಂದ ಮತ್ತೊಂದು ಪಿಂಗಾಣಿ ಬಟ್ಟಲಿನಲ್ಲಿ ಸೋಡಿಯಮ್ ಕಾರ್ನೋನೇಟ್ ದ್ರಾವಣ ತಯಾರಿಸಿ ಅದರಲ್ಲಿ ಅದ್ದಿಸಿದಾಗ ಬಣ್ಣ ರಹಿತವಾಗಿದ್ದ ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:242 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಪ್ಯಾಂಟ್‌ನ್ನು ಒಂದು ಲಕೋಟೆಯಲ್ಲಿ ಹಾಕಿ ಅದನ್ನು ಮುಚ್ಚಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ, ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:243 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ಪ್ಯಾಂಟಿನ ಜೇಬು ತೊಳೆದಾಗ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ ಧ್ರಾವಣವನ್ನು ಒಂದು ಗಾಜಿನ ಬಾಟಲಿಯಲ್ಲಿ ಹಾಕಿ ಅದಕ್ಕೆ ಮುಚ್ಚಳ ಹಾಕಿ ಮುಚ್ಚಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ, ಅದಕ್ಕೆ ಪಂಚರ ಮತ್ತು ಆರಕ್ಷಕ ಉಪಾಧೀಕ್ಷಕರ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ, ಅದಕ್ಕೆ ವಸ್ತು ಸಂಖ್ಯೆ ನೀಡಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:244 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರು ಆರೋಪಿಯಾದ ನಿನಗೆ ಹೇಳಿಕೆ ನೀಡುವಂತೆ ತಿಳಿಸಿದಾಗ ನೀನು ನಿನ್ನ ವಿವರಣೆಯನ್ನು ಬರೆದುಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಒತ್ತಾಯದಿಂದ ಬಲವಂತವಾಗಿ ನನ್ನಿಂದ ಬರೆಸಿಕೊಂಡಿದ್ದಾರೆ.

ಪ್ರಶ್ನೆ:245 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನಗೆ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸುವಂತೆ ಕೇಳಿದಾಗ ನೀನು ನಿನ್ನ ಹೀರೋ ಹೊಂಡ ಬೈಕ್‌ನಲ್ಲಿ ಇದ್ದ 29 ಹಾಳೆಯುಳ್ಳ ದಾಖಲಾತಿಗಳನ್ನು ತೆಗೆದು ಹಾಜರುಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:246 ದೋಸಾ–8/ಫ್ರಾಸಾ–8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತನಿಖಾಧಿಕಾರಿಯವರು ಸದರಿ ದಾಖಲಾತಿಗಳನ್ನು ಪರಿಶೀಲಿಸಿ, ಅದರಲ್ಲಿ

1 ರಿಂದ 11 ನೇ ದಾಖಲಾತಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ247 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಪಿರ್ಯಾದುದಾರ ಹಾಜರುಪಡಿಸಿದ ಡಿಜಿಟಲ್ ವಾಯ್ಸ್ ರೆಕಾರ್ಡರ್ ಅನ್ನು ಚಾಲು ಮಾಡಿ ಕೇಳಲಾಗಿ ಅದರಲ್ಲಿ ಸಂಭಾಷಣೆ ಸ್ಪಷ್ಟವಾಗಿರಲಿಲ್ಲ, ಆಗ ಟ್ರಾಪ್ ಪಂಚನಾಮೆಯನ್ನು ದೋಸಾ-9 ರವರ ಮೂಲಕ ಆರಕ್ಷಕ ಉಪಾಧೀಕ್ಷಕರು ದಿನಾಂಕ 16.09.2013 ರ ರಾತ್ರಿ 8.40 ಗಂಟೆಯಿಂದ ದಿನಾಂಕ 17.09.2013 ರ ಬೆಳಿಗ್ಗೆ 1.00 ಗಂಟೆಯವರೆಗೆ ಕುಮಟಾ ಪ್ರವಾಸಿ ಮಂದಿರದಲ್ಲಿ ಮಾಡಿದರು ಮತ್ತು ಆರಕ್ಷಕ ಉಪಾಧೀಕ್ಷಕರ ಉಕ್ತಲೇಖನಕ್ಕೆ ದೋಸಾ-9 ರವರು ಲ್ಯಾಪಟಾಪ್ ನಲ್ಲಿ ಅದನ್ನು ಬೆರಳಚ್ಚು ಮಾಡಿದರು ಮತ್ತು ಆ ಸಮಯದಲ್ಲಿ ದೋಸಾ-10 ರವರು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ248 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ಆರೋಪಿಯಿಂದ ವಶಪಡಿಸಿಕೊಳ್ಳಲಾದ ರೂ.3000/- ಹಣವನ್ನು ಸಾಕ್ಷಿಗೆ ನ್ಯಾಯಾಲಯದಲ್ಲಿ ಮೌಲ್ಯಯುತ ಪೆಟ್ಟಿಗೆಯಿಂದ ತೆಗೆದು ಹಣವನ್ನು ತೋರಿಸಿದ್ದು, ಅದು ರೂ.1000/- ದ ಎರಡು ನೋಟು ಹಾಗೂ ರೂ.500/- ದ ಎರಡು ನೋಟುಗಳಿದ್ದು, ಅದೇ ಹಣವನ್ನು ಆಗ ಆರೋಪಿಯಾದ ನೀನು ಎಸೆದ ಮೇಲೆ ಜಪ್ತು ಮಾಡಲಾಗಿದೆ ಎಂದು ಸಾಕ್ಷಿಯು ಸದರಿ ನೋಟುಗಳನ್ನು ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ249 ದೋಸಾ-8/ಫ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಜಪ್ತು ಮಾಡಿದ ಎಲ್ಲಾ ವಸ್ತುಗಳನ್ನು ಆರಕ್ಷಕ ಉಪಾಧೀಕ್ಷಕರು ಅವರ ತಾಬಾಗೆ ತೆಗೆದುಕೊಂಡರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ250 ದೋಸಾ-8/ಪ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನ್ನನ್ನು ಕರೆದುಕೊಂಡು ಪಂಚರು, ತಾವು ಎಲ್ಲರೂ ವಾಪಸ್ ಕಾರವಾರದ ಲೋಕಾಯುಕ್ತ ಠಾಣೆಗೆ ಬಂದಿದ್ದಾಗಿ ಹಾಗೂ ತಾನು ತನಿಖೆಗೆ ಸಹಾಯ ಮಾಡಿದ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿದ್ದೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ251 ದೋಸಾ-8/ಪ್ರಾಸಾ-8 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01.10.2013 ರಂದು ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಈ ಪ್ರಕರಣಕ್ಕೆ ಸಂಬಂಧಿಸಿದ ಜಪ್ತು ಮಾಡಿದ ವಸ್ತು ಸಂಖ್ಯೆ 1 ರಿಂದ 9 ಎ ಅನ್ನು ರಾಸಾಯನಿಕ ಪರೀಕ್ಷಾ ಕೇಂದ್ರ ಧಾರವಾಡಕ್ಕೆ ತೆಗೆದುಕೊಂಡು ಹೋಗಿ ಕೊಟ್ಟು ಅಲ್ಲಿಂದ ಸ್ವೀಕೃತಿ ಪಡೆದುಕೊಂಡು ಅದೇ ದಿನ ವಾಪಸ್ಸು ಆಗಿ ಆರಕ್ಷಕ ಉಪಾಧೀಕ್ಷಕರ ಮುಂದೆ ಸ್ವೀಕೃತಿಯನ್ನು ಮತ್ತು ವರದಿಯನ್ನು ಸಲ್ಲಿಸಿ, ಈ ಬಗ್ಗೆ ತಾನು ತನಿಖಾಧಿಕಾರಿಗೆ ಮರು ಹೇಳಿಕೆಯನ್ನು ನೀಡಿದ್ದೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ252 **ದೋಸಾ11/ಪ್ರಾಸಾ-9 ಮಂಜುನಾಥ ನಿಂಗಪ್ಪ ಪಟಗಾರ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು 2012 ರಿಂದ 2015 ರವರೆಗೆ ಆರಕ್ಷಕ ಪೇದೆಯಾಗಿ ಲೋಕಾಯುಕ್ತ ಠಾಣೆ ಕಾರವಾರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ253 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16.09.2013 ರಂದು ಫಿರ್ಯಾದಿ ರಾಮಾ ಬೀರಪ್ಪ ನಾಯ್ಕ ಬಾಡರವರು ಲೋಕಾಯುಕ್ತ ಕಚೇರಿಗೆ ಬಂದು ಒಂದು ಫಿರ್ಯಾದನ್ನು ಆರಕ್ಷಕ ಉಪಾಧೀಕ್ಷಕರಿಗೆ ನೀಡಿದ್ದು, ನಂತರ ಅವರು ಫಿರ್ಯಾದಿಯವರ ಫಿರ್ಯಾದನ್ನು ಪಡೆದುಕೊಂಡು ಲೋಕಾಯುಕ್ತ ಠಾಣಾ ಗುನ್ನಾ ಸಂ. 5/2013 ಕಲಂ 7, 13(1)(ಡಿ), 13(2) ಪಿ ಸಿ ಕಾಯ್ದೆಯಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಚಾಸಾ-7 ರವರ ಮುಖಾಂತರ

ನ್ಯಾಯಾಲಯಕ್ಕೆ ನಿವೇದಿಸಿಕೊಂಡರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ254 ದೋಸಾ11/ಫ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಪ್ರಾಯೋಗಿಕ ಪಂಚನಾಮೆಯ ಕುರಿತು ಸಂಜೆ 15.00 ಗಂಟೆಗೆ ಆರಕ್ಷಕ ಉಪಾಧೀಕ್ಷಕರ ಸಮ್ಮುಖದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದು ಪ್ರಾಯೋಗಿಕ ಪಂಚನಾಮೆ ಮಾಡಿಕೊಳ್ಳುವಂತೆ ಹೇಳಿದಾಗ ಅದಕ್ಕೆ ಪಂಚರು ಒಪ್ಪಿಕೊಂಡಾಗ ಪಂಚ-1 ಎಂದು ಚಾಸಾ-2 ರವರನ್ನು ಹಾಗೂ ಪಂಚ-2 ಎಂದು ಚಾಸಾ-3 ರವರನ್ನು ನೇಮಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ255 ದೋಸಾ11/ಫ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಫಿರ್ಯಾದಿಯು ತಂದು ಹಾಜರುಪಡಿಸಿದ ಹಣವನ್ನು ಆರಕ್ಷಕ ಉಪಾಧೀಕ್ಷಕರಿಗೆ ತೋರಿಸಿದಾಗ ಅದರಲ್ಲಿ ರೂ. 1000/- ದ 2 ನೋಟುಗಳು ಹಾಗೂ ರೂ. 500/- ರ 2 ನೋಟುಗಳಿದ್ದವು ಮತ್ತು ಅದನ್ನು ಪಂಚ-1 ರವರು ಎಣಿಸಿ, ಅದು ರೂ. 3000/- ಇದ್ದ ಬಗ್ಗೆ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ256 ದೋಸಾ11/ಫ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಚಾಸಾ-6 ರವರು ಫಿನಾಫ್ತಲಿನ್ ಪುಡಿಯನ್ನು ಸದರಿ ನೋಟಿನ ಎರಡೂ ಭಾಗಕ್ಕೆ ಸವರಿ ಆಗ ಉಪಯೋಗಿಸಿದ ಫಿನಾಫ್ತಲಿನ್ ಪುಡಿಯಲ್ಲಿ ಸ್ವಲ್ಪ ಪುಡಿಯನ್ನು ಮಾದರಿಗಾಗಿ ಒಂದು ಲಕೋಟೆಯಲ್ಲಿ ಸಂಗ್ರಹಿಸಿ, ಅದಕ್ಕೆ ಅರಗಿನಿಂದ ಸೀಲ್ ಮಾಡಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ವಸ್ತು ಸಂ. 1 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:257 ದೋಸಾ11/ಫ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಭಟ್ಟಿ ಇಳಿಸಿದ ನೀರನ್ನು ಮಾದರಿಗಾಗಿ ತೆಗೆದು ಅದನ್ನು ಕ್ವಾರ್ಟರ್ ಬಾಟಲಿಯಲ್ಲಿ ಹಾಕಿ ಸೀಲ್ ಮಾಡಿ ಎ ಎಂಬ ಆಂಗ್ಲ ಅಕ್ಷರದಿಂದ ಮೊಹರು ಹಾಕಿ ವಸ್ತು ಸಂ. 2 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:258 ದೋಸಾ11/ಫ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಚಾಸಾ-8 ರವರು ಒಂದು ಪಿಂಗಾಣಿ ಬಟ್ಟಲಿನಲ್ಲಿ ಭಟ್ಟಿ ಇಳಿಸಿದ ನೀರನ್ನು ಹಾಕಿ ಎರಡು ಚಮಚ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಅದಕ್ಕೆ ಬೆರೆಸಿ, ಸೋಡಿಯಂ ಕಾರ್ಬೋನೇಟ್ ಪುಡಿಯಲ್ಲಿ ಸ್ವಲ್ಪ ಪುಡಿಯನ್ನು ಮಾದರಿಗಾಗಿ ತೆಗೆದು ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ವಸ್ತು ಸಂ. 3 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:259 ದೋಸಾ11/ಫ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸೋಡಿಯಂ ಕಾರ್ಬೋನೇಟ್ ಹಾಗೂ ಭಟ್ಟಿ ಇಳಿಸಿದ ನೀರಿನ್ನು ಮಿಶ್ರಣ ಮಾಡಿದ ಧ್ರಾವಣದಿಂದ ಮಾದರಿಯನ್ನು ಕ್ವಾರ್ಟರ್ ಬಾಟಲಿಯಲ್ಲಿ ಸಂಗ್ರಹಿಸಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ವಸ್ತು ಸಂ. 4 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:260 ದೋಸಾ11/ಫ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಪಂಚ-1 ರವರು ನೋಟನ್ನು ಎಣಿಸಿದ ಎರಡೂ ಕೈ ಯನ್ನು ಈಗಾಗಲೇ ತಯಾರು ಮಾಡಿದ ಪಿಂಗಾಣಿ ಬಟ್ಟಲಿನಲ್ಲಿ ಕೈಯನ್ನು ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:261 ದೋಸಾ11/ಫ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಬಣ್ಣ

ಪರಿವರ್ತನೆಯಾದ ದ್ರಾವಣವನ್ನು ಒಂದು ಕ್ವಾರ್ಟರ್ ಬಾಟಲಿಗೆ ಹಾಕಿ ಸಂಗ್ರಹಿಸಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ವಸ್ತು ಸಂ. 5 ಎಂದು ಗುರುತಿಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ262 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈ ರೀತಿ ಬಣ್ಣ ಪರಿವರ್ತನೆಯಾದ ಬಗ್ಗೆ ಪಂಚರಿಗೆ ಹಾಗೂ ಫಿರ್ಯಾದಿಗೆ ತಿಳಿಸಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಈ ರೀತಿ ಬಣ್ಣ ಪರಿವರ್ತನೆಯಾದ ಬಗ್ಗೆ ತಿಳಿಸಿದ ನಂತರ ನೋಟನ್ನು ಒಂದು ಕವರಿನಲ್ಲಿ ಹಾಕಿ ಫಿರ್ಯಾದಿಯ ಎಡ ಕಿಸೆಯಲ್ಲಿ ಪಂಚ-1 ರವರು ಇರಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ263 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆ ನೋಟುಗಳನ್ನು ಆರೋಪಿಯಾದ ನಿನಗೆ ಕೊಡುವಾಗ ಅಥವಾ ಅಲ್ಲಿ ಇಡು ಎಂದಾಗ ಮಾತ್ರ ಅದನ್ನು ಮುಟ್ಟಬೇಕು, ಪದೇ ಪದೇ ಅದನ್ನು ಮುಟ್ಟಬಾರದಾಗಿ ಫಿರ್ಯಾದಿಗೆ ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ264 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರು ವಸ್ತು ಸಂ. 1 ರಿಂದ 5 ನೇದವುಗಳನ್ನು ಮಾದರಿಗಾಗಿ ಠಾಣೆಯ ಕಪಾಟಿನಲ್ಲಿ ಯೋಗ್ಯವಾಗಿ ಭದ್ರವಾಗಿ ಇರಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ265 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಾಯೋಗಿಕ ಪಂಚನಾಮೆಯನ್ನು ಆ ದಿನ 15.00 ಗಂಟೆಯಿಂದ 16.30 ವರೆಗೆ ಲ್ಯಾಪಟಾಪ್ ನಲ್ಲಿ ಚಾಸಾ-9 ರವರು ಬೆರಳಚ್ಚು ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ266 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಈ ಎಲ್ಲಾ ಪ್ರಾಯೋಗಿಕ ಪಂಚನಾಮೆಯ ಛಾಯಾಚಿತ್ರಗಳನ್ನು ಚಾಸಾ-10 ರವರ ಮೂಲಕ ತೆಗೆಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ267 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ 16.30 ಗಂಟೆಗೆ ಆರಕ್ಷಕ ಉಪಾಧೀಕ್ಷಕರು ಹಾಗೂ ಅಧಿಕಾರಿಗಳು , ಪಂಚರು, ತಾನು ಹಾಗೂ ಇತರ ಸಿಬ್ಬಂದಿಗಳ ಎರಡು ಇಲಾಖಾ ವಾಹನದಲ್ಲಿ ಆರೋಪಿ ಇರುವ ಕುಮಟಾಕ್ಕೆ ಸಲಕರಣೆಗಳೊಂದಿಗೆ ಹೊರಟೆ, ಕುಮಟಾ ಪಟ್ಟಣಕ್ಕೆ 18.00 ಗಂಟೆಗೆ ತಲಪಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ268 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಫಿರ್ಯಾದಿಯವರು ಆರೋಪಿಯಾದ ನಿನಗೆ ತಮ್ಮ ಮೊಬೈಲ್ ನಿಂದ ಪೋನ್ ಮಾಡಿದಾಗ ನೀನು ತಾಲೂಕು ಪಂಚಾಯತಿ ಕುಮಟಾದಲ್ಲಿ ಇರುವುದಾಗಿ ಆಗ ಫಿರ್ಯಾದಿಗೆ ಹೇಳಿದ್ದನ್ನು ಫಿರ್ಯಾದಿ ತನಿಖಾಧಿಕಾರಿಗೆ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ269 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ 18.15 ಗಂಟೆಗೆ ಗಿಬ್ಸ್ ವೃತ್ತದ ಬಳಿ ಬಂದು ಆರಕ್ಷಕ ಉಪಾಧೀಕ್ಷಕರು ಪಂಚ-1 ಹಾಗೂ ಫಿರ್ಯಾದಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ತಿಳಿಸಿದ ಸೂಚನೆಗಳನ್ನು ಮತ್ತೊಮ್ಮೆ ವಾಯ್ಸು ರೆಕಾರ್ಡ್ ಮಾಡಬೇಕು ಹಾಗೂ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ಆರೋಪಿ ನೀನು ಕೇಳಿದಾಗ ಕೊಡಬೇಕು ಅಥವಾ ನೀನು ಇಡು ಎಂದಲ್ಲಿ ಇಡಬೇಕು ಎಂದು ಫಿರ್ಯಾದಿ ಹಾಗೂ ಪಂಚ-1 ರವರಿಗೆ ಆರಕ್ಷಕ ಉಪಾಧೀಕ್ಷಕರು ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:270 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫಿರ್ಯಾದಿಯು ಆರೋಪಿಯು ಬೇಡಿಕೆ ಇಟ್ಟ ಹಣವನ್ನು ಪಡೆದಾಗ ಹೊರಗೆ ಬಂದು ಸನ್ನೆ ಮೂಲಕ ತಿಳಿಸಬೇಕು ಎಂದು ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:271 ದೋಸಾ-11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಫಿರ್ಯಾದಿ ಹಾಗೂ ಪಂಚ-1 ರವರು ಆರೋಪಿಯಾದ ನೀನು ಇರುವ ತಾಲೂಕು ಪಂಚಾಯತಿ ಕುಮಟಾ ಕಚೇರಿ ಒಳಗಡೆ ಹೋಗಿದ್ದು, ತಾನು, ಆರಕ್ಷಕ ಉಪಾಧೀಕ್ಷಕರು ಹಾಗೂ ಪಂಚ-2 ರವರು ತಾಲೂಕು ಪಂಚಾಯತಿ ಎದುರಿಗೆ ಇರುವ ಉತ್ತರ ದಿಕ್ಕಿಗೆ ನಿಂತುಕೊಂಡೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:272 ದೋಸಾ-11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, A-1 Xerox ಹತ್ತಿರ ಚಾಸಾ-8 ಮತ್ತು 10 ಮತ್ತು ತಾನು, ಚಾಸಾ-7, 9 ತಾಲೂಕು ಪಂಚಾಯತಿಯ ಬಲಗಡೆ ಇರುವ ಪೂರ್ವ ದಿಕ್ಕಿನ ಕಂಪೌಂಡ್ ಹತ್ತಿರ ನಿಂತುಕೊಂಡೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:273 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಒಳಗಡೆ ಹೋದ ಫಿರ್ಯಾದಿಯವರ ಸನ್ನೆಗಾಗಿ ಕಾಯುತ್ತಿದ್ದಾಗ ಆರಕ್ಷಕ ಉಪಾಧೀಕ್ಷಕರು ಫಿರ್ಯಾದಿಯವರು 18.30 ಗಂಟೆಗೆ ಹೊರಗಡೆ ಬಂದು ಸನ್ನೆ ಮಾಡಿ ತಿಳಿಸಿದಾಗ ತಾವೆಲ್ಲರೂ ಹೋಗಿ ನೋಡಿದಾಗ ಫಿರ್ಯಾದಿ ಹಾಗೂ ಪಂಚ-1 ರವರು ಆರೋಪಿ ನೀನು ಹೊರಗಡೆ ಓಡಿ ಹೋದ ಎಂದು ತಿಳಿಸಿದಾಗ ತಾವೆಲ್ಲಾ ಕುಮಟಾ ಪಟ್ಟಣದಲ್ಲಿ ಆರೋಪಿಗಾಗಿ ಹುಡುಕಾಡಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:274 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಹೆರವಟ್ಟಾ

ಶಾಂತಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ಆರೋಪಿಯಾದ ನೀನು ಬೈಕಿನಲ್ಲಿ ಹೋಗುತ್ತಿರುವಾಗ ಫಿರ್ಯಾದಿ ಇವನೇ ಆರೋಪಿ ಎಂದು ಆರಕ್ಷಕ ಉಪಾಧೀಕ್ಷಕರಿಗೆ ತಿಳಿಸಿದಾಗ ಕೂಡಲೇ ಆರೋಪಿಯು ತನ್ನ ಕಿಸೆಯಲ್ಲಿದ್ದ ಹಣವನ್ನು ಪಕ್ಕದ ಗಿಡಗಂಟೆಗಳ ಹತ್ತಿರ ಬಿಸಾಡಿ ಹೋಗುತ್ತಿರುವಾಗ ಆರಕ್ಷಕ ಉಪಾಧೀಕ್ಷಕರು ಸಿಬ್ಬಂದಿಗಳಿಗೆ ಆರೋಪಿಯಾದ ನಿನ್ನನ್ನು ಹಿಡಿಯಲು ತಿಳಿಸಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ275 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಚಾಸಾ-7 ಮತ್ತು 9 ರವರು ಆರೋಪಿಯಾದ ನಿನ್ನನ್ನು ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಹೋಗಿ ಹೆರವಟ್ಟಾದ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ ರಸ್ತೆಯಲ್ಲಿ ಆರೋಪಿಯಾದ ನಿನ್ನನ್ನು ಹಿಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ276 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆಗ ಫಿರ್ಯಾದಿ ಆಪಾದಿತ ವ್ಯಕ್ತಿ ಇವನೇ ಎಂದು ಆರೋಪಿಯಾದ ನಿನ್ನನ್ನು ತೋರಿಸಿದಾಗ ತಾನೂ ಸಹ ಅದೇ ಇಲಾಖಾ ವಾಹನದಲ್ಲಿ ಇದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ277 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದೆ ಇರುವ ಆರೋಪಿ ಅದೇ ಆರೋಪಿಯಾಗಿದ್ದಾನೆಂದು ಸಾಕ್ಷಿ ನಿನ್ನನ್ನು ನೋಡಿ ಗುರುತಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ278 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನಿನ್ನ ಎರಡೂ ಕೈಗಳನ್ನು ಚಾಸಾ-7 ಮತ್ತು 9 ರವರು ಹಿಡಿದುಕೊಂಡು, ಆರಕ್ಷಕ ಉಪಾಧೀಕ್ಷಕರು ತಮ್ಮ ಗುರುತಿನ ಚೀಟಿಯನ್ನು ತೋರಿಸಿ ತಮ್ಮ ಪದನಾಮ ಮತ್ತು ಇಲಾಖೆಯ ವಿವರವನ್ನು ಹೇಳಿದರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ

ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ279 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ 20.40 ಗಂಟೆಗೆ ಆರೋಪಿಯಾದ ನಿನ್ನನ್ನು ದಸ್ತಗಿರಿ ಮಾಡಿ ಆರಕ್ಷಕ ಉಪಾಧೀಕ್ಷಕರು ತಮ್ಮ ವಶಕ್ಕೆ ತೆಗೆದುಕೊಂಡು, ಹಣವನ್ನು ಎಸೆದಿದ್ದ ಗಿಡಗಂಟಿಯ ಜಾಗ ಆರೋಪಿಯಾದ ನಿನ್ನನ್ನು ಹಿಡಿದ ಸ್ಥಳದಿಂದ ಸುಮಾರು 50 ಮೀಟರ್ ದೂರದಲ್ಲಿ ಇತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ280 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರಕ್ಷಕ ಉಪಾಧೀಕ್ಷಕರವರ ಸೂಚನೆ ಮೇರೆಗೆ ಅವರೊಂದಿಗೆ ಹೋಗಿ ಪಂಚ-1 ನೇಯವರು ಆ ಹಣವನ್ನು ಎಣಿಸಿದನ್ನು ತಾನು ನೋಡಿರುತ್ತೇನೆ ಮತ್ತು ಆಗ ತಾನೂ ವಾಹನದಿಂದ ಎಲ್ಲರೊಟ್ಟಿಗೆ ಇಳಿದಿದ್ದೆ ಮತ್ತು ಆ ಹಣದಲ್ಲಿ ರೂ. 1,000/- ದ ಎರಡು ನೋಟು ಮತ್ತು ರೂ. 500/- ರ 2 ನೋಟುಗಳು ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ281 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ನೋಟುಗಳ ಸಂಖ್ಯೆ ಪ್ರಾಯೋಗಿಕ ಪಂಚನಾಮೆಯಲ್ಲಿ ಇರುವ ನೋಟುಗಳ ಸಂಖ್ಯೆಗಳೊಂದಿಗೆ ತಾಳೆಯಾದವು ಮತ್ತು ಆ ನೋಟುಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಸೀಲ್ ಮಾಡಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಮೊಹರು ಮಾಡಿ ವಸ್ತು ಸಂ. 6 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ282 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಅಲ್ಲಿ ಬೆಳಕಿನ ಅಭಾವ ಇದ್ದದ್ದರಿಂದ ಹತ್ತಿರದ ಪ್ರವಾಸಿ ಮಂದಿರಕ್ಕೆ ಬಂದು ಪಂಚನಾಮೆಯನ್ನು ಮಾಡಲು ತಮ್ಮನ್ನೆಲ್ಲಾ ಕರೆದುಕೊಂಡು ಹೋಗಿ, ಆರೋಪಿಯಾದ ನಿನ್ನ ಮೋಟಾರ್ ಸೈಕಲ್ ಅನ್ನು

ಚಾಸಾ–10 ರವರು ಪ್ರವಾಸಿ ಮಂದಿರದ ಬಳಿ ತಂದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ283 ದೋಸಾ11/ಪ್ರಾಸಾ–9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಆರೋಪಿಯಾದ ನಿನ್ನ ಎರಡೂ ಕೈಗಳನ್ನು ಚಾಸಾ–7 ಮತ್ತು 9 ರವರು ಹಿಡಿದುಕೊಂಡು ಅಲ್ಲಿಗೆ ತಮ್ಮ ಒಟ್ಟಿಗೆ ಕರೆ ತಂದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ284 ದೋಸಾ11/ಪ್ರಾಸಾ–9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ತಾನು ಎರಡು ಪಿಂಗಾಣಿ ಬಟ್ಟಲಿನಲ್ಲಿ ಭಟ್ಟಿ ಇಳಿಸಿದ ನೀರು ಹಾಗೂ ಒಂದೊಂದು ಚಮಚ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಹಾಕಿ ದ್ರಾವಣವನ್ನು ತಯಾರಿಸಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ285 ದೋಸಾ11/ಪ್ರಾಸಾ–9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯ ಬಲಗೈ ಬೆರಳುಗಳನ್ನು ಒಂದು ಬಟ್ಟಲಿನಲ್ಲಿ ಇದ್ದ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ286 ದೋಸಾ11/ಪ್ರಾಸಾ–9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಅದನ್ನು ಎರಡು ಕ್ವಾರ್ಟರ್ ಬಾಟಲಿಯಲ್ಲಿ ಆ ದ್ರಾವಣವನ್ನು ಸಂಗ್ರಹಿಸಿ ಬಟ್ಟೆ ಕಟ್ಟಿ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ಸೀಲ್ ಮಾಡಿ ಅದಕ್ಕೆ ಪಂಚರ ಹಾಗೂ ತನಿಖಾಧಿಕಾರಿಯವರ ವಿವರವನ್ನು ಬರೆದು ವಸ್ತು ಸಂ. 7 ಮತ್ತು 7 ಎ ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:287 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಆರೋಪಿಯಾದ ನಿನ್ನ ಎಡಗೈ ಬೆರಳುಗಳನ್ನು ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆ:288 ದೋಸಾ11/ಪ್ರಾಸಾ-9 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಅದನ್ನೂ ಸಹ ಎರಡು ಕ್ವಾರ್ಟರ್ ಬಾಟಲಿಯಲ್ಲಿ ಆ ದ್ರಾವಣವನ್ನು ಸಂಗ್ರಹಿಸಿ ಬಟ್ಟೆ ಕಟ್ಟಿ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ಸೀಲ್ ಮಾಡಿ ಅದಕ್ಕೆ ಪಂಚರ ಹಾಗೂ ತನಿಖಾಧಿಕಾರಿಯವರ ವಿವರವನ್ನು ಬರೆದು ವಸ್ತು ಸಂ. 8 ಮತ್ತು 8ಎ ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರ: ಸುಳ್ಳು.

ಪ್ರಶ್ನೆಃ405 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟುಗಳ ಸಂಖ್ಯೆಗಳನ್ನು ಓದಿ ಹೇಳಿದ್ದಾಗಿ ಹಾಗೂ ಅವು 1) 1CM747593 (2) 1CM747594 (3) 5EQ406727 (4) 4DT745669 ಇರುವುದಾಗಿ ತಿಳಿಸಿದರೆಂದು ಮತ್ತು ಸದರಿ ಪಂಚರು ಈ ನೋಟುಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ಸಂಖ್ಯೆಗಳೇ ಆಗಿರುವುದಾಗಿ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ406 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಅವುಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಅರಗು ಹಾಕಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ

ಪಡೆದು ಮತ್ತು ತಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 6 ಎಂದು ಗುರುತಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ407 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದಲ್ಲಿ ಮೌಲ್ಯಯುತ ಪೆಟ್ಟಿಗೆಯಿಂದ ಹೊರತೆಗೆದು ತೋರಿಸಿದ ಲಕೋಟೆಯಲ್ಲಿ ಆಗ ಹಣವನ್ನು ಜಪ್ತು ಮಾಡಿರುತ್ತೇನೆ ಮತ್ತು ಆ ಲಕೋಟೆಯಿಂದ ತೆಗೆದು ತೋರಿಸಿದ ರೂ. 1000/- ದ ಎರಡು ನೋಟು ಮತ್ತು ರೂ. 500/- ರ ಎರಡು ನೋಟು ಆಗ ಜಪ್ತು ಮಾಡಿದ ಹಣ ಆಗಿರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ408 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸ್ಥಳದಲ್ಲಿ ಆ ಸಮಯದಲ್ಲಿ ನಿಪಿ-19 ರಿಂದ 21 ಮತ್ತು 37 ರಂತೆ ಛಾಯಾಚಿತ್ರಗಳನ್ನು ತೆಗೆಸಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ409 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಫಿರ್ಯಾದುದಾರರಿಗೆ ಏನು ನಡೆಯಿತು ಎಂದು ಮತ್ತೊಮ್ಮೆ ವಿಚಾರಿಸಿದಾಗ ಫಿರ್ಯಾದುದಾರರು ತಾನು ಹಾಗೂ ಪಂಚ-1 ರವರು ಕುಮಟಾ ಗಿಬ್ಸ್ ಹೈಸ್ಕೂಲ್ ವೃತ್ತದಿಂದ ಕಾಲ್ನಡಿಗೆಯಲ್ಲಿ ಹೊರಟು ತಾಲೂಕು ಪಂಚಾಯತಿ ಕಚೇರಿಗೆ ಹೋಗಿ ಸದರಿ ಕಚೇರಿಯ ಒಳಗೆ ಹೋಗಿ ಆ ಸಮಯದಲ್ಲಿ ಆರೋಪಿ ನೀನು ನಿಮ್ಮ ಮೇಜಿನ ಹತ್ತಿರ ಇದ್ದು ಪಂಚ-1 ರವರಿಗೆ ಅವರೇ ಆರೋಪಿ ನೀನೇ ಎಂದು ತೋರಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ410 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಆರೋಪಿಯಾದ ನಿನ್ನ ಹತ್ತಿರ ಹೋಗಿದ್ದು ಪಂಚ-1 ರವರು ತನ್ನನ್ನು ಹಿಂಬಾಲಿಸಿ ತನ್ನ ಹಿಂದುಗಡೆ ಆರೋಪಿಯಾದ ನಿನ್ನ ಕೋಣೆಯ ಬಾಗಿಲ ಬಳಿ ನಿಂತುಕೊಂಡರೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ411 ದೋಸಾ17/ಫ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದುದಾರರು ತಮ್ಮ ಕೆಲಸದ ಬಗ್ಗೆ ಆರೋಪಿಯಾದ ನಿನಗೆ ಕೇಳಿದಾಗ ಆರೋಪಿಯಾದ ನೀನು ಹಿಂದೆ ಹೇಳಿದಂತೆ ಒಟ್ಟು ಹಣವನ್ನು ತಂದ ಬಗ್ಗೆ ಕೇಳಿದರು, ಅದರಂತೆ ತಾನು ತನ್ನ ಜೇಬಿನಿಂದ ಫಿನಾಪ್ತಲಿನ್ ಪುಡಿ ಸವರಿದ ನೋಟುಗಳನ್ನು ತೆಗೆದುಕೊಡಲು ಹೋದಾಗ ಅವರು ತನ್ನನ್ನು ಕರೆದುಕೊಂಡು ಕಚೇರಿಯಿಂದ ಹೊರಗೆ ಬಂದು ಕಚೇರಿ ಕಂಪೌಂಡ್ ನಲ್ಲಿರುವ ದ್ವಿಚಕ್ರ ವಾಹನ ನಿಲ್ಲಿಸುವ ಸ್ಟ್ಯಾಂಡ್ ಬಳಿ ಬಂದು ತನ್ನ ಬಳಿಯಿಂದ ರೂ. 3000/- ಲಂಚದ ಹಣವನ್ನು ಪಡೆದು ತಮ್ಮ ಎರಡೂ ಕೈಗಳಿಂದ ಎಣಿಸಿ ತಮ್ಮ ಪ್ಯಾಂಟಿನ ಬಲ ಕಿಸೆಯಲ್ಲಿ ಇಟ್ಟುಕೊಂಡು ತಮ್ಮ ಹಿರೋ ಹೊಂಡಾ ಮೋಟಾರ್ ಸೈಕಲ್ ಸಂ. ಕೆಎ-47/ಕೆ-5710 ನೇದ್ದರ ಮೇಲೆ ಹೊರಟು ಹೋದರೆಂದು ಮತ್ತು ಆ ಸಮಯದಲ್ಲಿ ಪಂಚ-1 ರವರು ತನ್ನ ಹಿಂದುಗಡೆ ನಿಂತುಕೊಂಡಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ412 ದೋಸಾ17/ಫ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಪಿರ್ಯಾದುದಾರರು ಕೂಡಲೇ ತನ್ನ ಪ್ಯಾಂಟಿನ ಕಿಸೆಯಿಂದ ಕರವಸ್ತ್ರವನ್ನು ತೆಗೆದು ಜಾಡಿಸಿ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿರುತ್ತೇನೆ ಎಂದು ಫಿರ್ಯಾದಿ ತಿಳಿಸಿದ ಹಾಗೂ ಆರೋಪಿಯಾದ ನಿನ್ನನ್ನು ಹಿಡಿಯಲು ತಮ್ಮೊಂದಿಗೆ ಬಂದಿರುವುದಾಗಿ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ413 ದೋಸಾ17/ಫ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪಂಚ-1 ರವರನ್ನು ವಿಚಾರಿಸಿದಾಗ ಅವರು ಫಿರ್ಯಾದುದಾರರು ಹೇಳಿದ ಸದರಿ ಘಟನೆಗೆ ಅನುಸರಿಸಿ ಹೇಳಿದ ಮತ್ತು ಆರೋಪಿಯನ್ನು ದಸ್ತಗಿರಿ ಮಾಡಿದ ಸ್ಥಳವು ಇಕ್ಕಟ್ಟಾದ ಸಾರ್ವಜನಿಕ ಸ್ಥಳವಾಗಿತ್ತು ಮತ್ತು ಸದರಿ ಸ್ಥಳದಲ್ಲಿ ವಿದ್ಯುತ್ ಬೆಳಕಿನ ಅಭಾವ ಆಗಿದ್ದರಿಂದ ಸದರಿ ಸ್ಥಳದಲ್ಲಿ ಪಂಚನಾಮೆ ಮುಂದುವರಿಸುವುದು ಅಸಾಧ್ಯವಾದ ಕಾರಣ ಆರೋಪಿಯಾದ ನಿನ್ನ ಎರಡೂ ಕೈಗಳನ್ನು ದೋಸಾ-7 ಹಾಗೂ ದೋಸಾ-9 ರವರಿಗೆ ಗಟ್ಟಿಯಾಗಿ ಹಿಡಿದುಕೊಳ್ಳುವಂತೆ ಹೇಳಿದ ಪ್ರಕಾರ ಅವರು ಆರೋಪಿಯಾದ ನಿನ್ನ ಎರಡೂ ಕೈಗಳನ್ನು ಹಿಡಿದುಕೊಂಡರೆಂದು ಸಾಕ್ಷ್ಯ

ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ414 ದೋಸಾ17/ಪ್ರಾಸಾ–13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅವರನ್ನು ಪಂಚರ ಸಮಕ್ಷಮ ಇಲಾಖಾ ವಾಹನದಲ್ಲಿ ಕುಳ್ಳಿರಿಸಿ ಕುಮಟಾ ಪ್ರವಾಸಿ ಮಂದಿರಕ್ಕೆ ಕರೆ ತಂದೆ ಮತ್ತು ಆರೋಪಿಯಾದ ನೀನು ಚಲಾಯಿಸಿಕೊಂಡು ಹಿರೋ ಹೊಂಡಾ ಮೋಟಾರ್ ಸೈಕಲ್ ಅನ್ನು ಸಹ ದೋಸಾ–10 ರವರು ಚಲಾಯಿಸಿಕೊಂಡು ಸದರಿ ಪ್ರವಾಸಿ ಮಂದಿರಕ್ಕೆ ತಮ್ಮೊಂದಿಗೆ ಬಂದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ415 ದೋಸಾ17/ಪ್ರಾಸಾ–13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಸೂಚಿಸಿದ ಮೇರೆಗೆ ದೋಸಾ–11 ರವರಿಂದ ಎರಡು ಪಿಂಗಾಣಿ ಬಟ್ಟಲುಗಳನ್ನು ಸ್ವಚ್ಛವಾಗಿ ತೊಳೆದು ಅವುಗಳಲ್ಲಿ ಭಟ್ಟಿ ಇಳಿಸಿದ ನೀರನ್ನು ಹಾಕಿ ಅವುಗಳಲ್ಲಿ ಒಂದೊಂದು ಚಮಚ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಹಾಕಿ ದ್ರಾವಣ ತಯಾರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ416 ದೋಸಾ17/ಪ್ರಾಸಾ–13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈ ದ್ರಾವಣದಲ್ಲಿ ಆರೋಪಿಯಾದ ನಿನ್ನ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಅದ್ದಿ ತೊಳೆಯಲು ಸೂಚಿಸಿದಂತೆ ಅವರು ತಮ್ಮ ಬಲಗೈ ಬೆರಳುಗಳನ್ನು ಒಂದು ಬಟ್ಟಲಿನ ದ್ರಾವಣದಲ್ಲಿ ಅದ್ದಿ ತೊಳೆದಾಗ ಸದರಿ ಬಣ್ಣ ರಹಿತ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ417 ದೋಸಾ17/ಪ್ರಾಸಾ–13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿದ್ದನ್ನು ಎರಡು ಪ್ರತ್ಯೇಕ ಸಣ್ಣ ಗಾಜಿನ ಕ್ವಾರ್ಟರ್ ಬಾಟಲಿಯಲ್ಲಿ ಹಾಕಿ ಮುಚ್ಚಳ ಬಂದ್ ಮಾಡಿ ಅರಗು ಮೊಹರು ಹಾಕಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ತಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ

ಅಂಟಿಸಿ ವಸ್ತು ಸಂ. 7 ಮತು 7(ಎ) ಎಂದು ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ418 ದೋಸಾ17/ಫ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನ್ನ ಎಡಗೈ ಬೆರಳುಗಳನ್ನು ಇನ್ನೊಂದು ಬಟ್ಟಲಿನಲ್ಲಿ ದ್ರಾವಣದಲ್ಲಿ ಅದ್ದಿ ತೊಳೆದಾಗ ಸದರಿ ಬಣ್ಣ ರಹಿತ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು ಮತ್ತು ಅದನ್ನು ಎರಡು ಪ್ರತ್ಯೇಕ ಸಣ್ಣ ಗಾಜಿನ ಕ್ವಾರ್ಟರ್ ಬಾಟಲಿಯಲ್ಲಿ ಹಾಕಿ ಮುಚ್ಚಳ ಬಂದ್ ಮಾಡಿ ಅರಗು ಮೊಹರು ಹಾಕಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ತಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 8 ಮತು 8(ಎ) ಎಂದು ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ419 ದೋಸಾ17/ಫ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಆರೋಪಿಯಾದ ನೀನು ಲಂಚದ ಹಣವನ್ನು ತಮ್ಮ ಪ್ಯಾಂಟಿನ ಬಲಕಿಸೆಯಲ್ಲಿ ಇಟ್ಟುಕೊಂಡಿದ್ದರಿಂದ ಅವರಿಗೆ ಅವರ ತಮ್ಮನಾದ ಶ್ರೀ ವಿಠ್ಠ ನಾಯ್ಕರವರಿಂದ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ ಅವರು ಧರಿಸಿರುವ ಪ್ಯಾಂಟ್ ಅನ್ನು ಪಡೆದು ಸಿಬ್ಬಂದಿಯಾದ ದೋಸಾ-11 ರವರ ಕಡೆಯಿಂದ ಒಂದು ಪಿಂಗಾಣಿ ಬಟ್ಟಲಿನಲ್ಲಿ ಭಟ್ಟಿ ಇಳಿಸಿದ ನೀರನ್ನು ಹಾಕಿ ಅದಕ್ಕೆ ಒಂದು ಚಮಚ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಹಾಕಿಸಿ ದ್ರಾವಣ ತಯಾರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ420 ದೋಸಾ17/ಫ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ದ್ರಾವಣವು ಬಣ್ಣ ರಹಿತವಾಗಿದ್ದು, ಸದರಿ ದ್ರಾವಣದಲ್ಲಿ ಮೇಲೆ ಹೇಳಿದ ಪ್ಯಾಂಟಿನ ಬಲಕಿಸೆಯ ಒಳಭಾಗವನ್ನು ಸದರಿ ಬಣ್ಣ ರಹಿತ ದ್ರಾವಣದಲ್ಲಿ ಅದ್ದಿ ತೊಳೆದು ಅದು ಸ್ವಲ್ಪ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು ಮತ್ತು ಸದರಿ ದ್ರಾವಣವನ್ನು ಒಂದು ಸಣ್ಣ ಗಾಜಿನ ಕ್ವಾರ್ಟರ್ ಬಾಟಲಿಯಲ್ಲಿ ಹಾಕಿ ಮುಚ್ಚಳ ಬಂದ್ ಮಾಡಿ ಅರಗು

ಮೊಹರು ಹಾಕಿ A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ತಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 9 ಎಂದು ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ421 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಪ್ಯಾಂಟ್ ಅನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಅರಗು A ಎಂಬ ಆಂಗ್ಲ ಅಕ್ಷರದಿಂದ ಅರಗಿನ ಮೊಹರು ಹಾಕಿ ವಿವರ ಬರೆದು ಪಂಚರ ಸಹಿ ಪಡೆದು ಮತ್ತು ತಾನು ಕೂಡಾ ಸಹಿ ಮಾಡಿದ ಗುರುತಿನ ಚೀಟಿ ಅಂಟಿಸಿ ವಸ್ತು ಸಂ. 9(ಎ) ಎಂದು ಗುರುತಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ422 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಆರೋಪಿಯಾದ ನಿನಗೆ ಫಿರ್ಯಾದಿಯಿಂದ ಪಡೆದ ಲಂಚದ ಹಣದ ಬಗ್ಗೆ ತಮ್ಮದೇನಾದರೂ ವಿವರಣೆ ಇದ್ದಲ್ಲಿ ಕೊಡಲು ತಿಳಿಸಿದಂತೆ ನೀನು ನಿನ್ನ ಲಿಖಿತ ಹೇಳಿಕೆಯನ್ನು ಕನ್ನಡದಲ್ಲಿ ಬರೆದುಕೊಟ್ಟರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ನಾನು ಸ್ವಇಚ್ಛೆಯಿಂದ ಲಿಖಿತ ಹೇಳಿಕೆ ಬರೆದುಕೊಟ್ಟಿಲ್ಲ, ಬಲವಂತದಿಂದ ಒತ್ತಾಯದಿಂದ ಬರೆಸಿಕೊಂಡಿದ್ದಾರೆ.

ಪ್ರಶ್ನೆಃ423 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಲಿಖಿತ ಹೇಳಿಕೆಯಲ್ಲಿ ಆರೋಪಿ ತಾನು ಸಹಾಯಕ ನಿರ್ದೇಶಕನಾಗಿ ತಾಲೂಕು ಪಂಚಾಯತಿ ಕುಮಟಾದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ, ಕಳೆದ 4-5 ದಿನಗಳಿಂದ ಆಹಾರ ಸಾಗಾಣಿಕೆದಾರರು ತನಗೆ ತಕ್ಷಣ ಕ್ಷೀರಭಾಗ್ಯ ಹಾಲಿನ ಪುಡಿ ಸ್ವೀಕೃತಿ ರಸೀದಿಯನ್ನು ಕಳುಹಿಸಲು ಪೀಡಿಸುತ್ತಿದ್ದರು, ಈ ಯೋಜನೆ ತೀವ್ರವಾಗಿ ನಡೆಯುವುದಕ್ಕಾಗಿ ಸ್ವೀಕೃತಿ ರಸೀದಿಗಳನ್ನು ಕೆ ಎಂ ಎಫ್ ಧಾರವಾಡಕ್ಕೆ ಕಳುಹಿಸುವುದು ಅನಿವಾರ್ಯ ಇರುವುದರಿಂದ ಸದರಿಯವರ ಕಾಗದ ಪತ್ರಗಳನ್ನು ವಿವಿಧ ಕಚೇರಿಗೆ ಕಳುಹಿಸಲು ತಾನೇ ಪರಿಶೀಲಿಸಿ 3560 ಕೆ ಜಿ ಹಾಲಿನ ಪುಡಿ ಶಾಲೆಗಳಿಗೆ ವಿತರಿಸುವ ಬದಲು ಕೇವಲ 2557 ಕೆ ಜಿ ಹಾಲಿನ ಪುಡಿಯನ್ನು ಮಾತ್ರ ಶಾಲೆಗಳಿಗೆ ವಿತರಿಸಿದ ಬಗ್ಗೆ ಸ್ವೀಕೃತಿಯನ್ನು ಜಿಲ್ಲಾ DDPI

ಕಾರವಾರರವರಿಗೆ, ಜಿಲ್ಲಾ ಶಿಕ್ಷಣಾಧಿಕಾರಿಗೆ ಹಾಗೂ ಕೆ ಎಂ ಎಫ್ ಧಾರವಾಡದ ಎ. ಎಂ. ಬಡಿಗೇರ್ ರವರಿಗೆ ಮೇಲ್ ಮುಖಾಂತರ ಕಳುಹಿಸಿರುತ್ತೇನೆಂದು ಹೇಳಿಕೆಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ424 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈ ಯೋಜನೆಯಲ್ಲಿ ಸಾಗಾಣಿಕೆದಾರ ಎಂದು ಶ್ರೀ ರಾಮಾ ನಾಯ್ಕರವರು ಅಧಿಕೃತ ಆಧಾರ ಕೂಡಾ ಈ ಕಚೇರಿಗೆ ಬರುವ ಪೂರ್ವದಲ್ಲಿ ತನ್ನ ಕಚೇರಿಗೆ ಇಂದು 16.09.2013 ರ ಮಧ್ಯಾಹ್ನ ತಾನು ಕೂಜಳ್ಳಿ ಎಚ್ ಪಿ ಎಸ್ ಶಾಲೆಯಿಂದ ಹಿಂದಿರುಗುವಾಗ ಅಂದರೆ ಸುಮಾರು 6.15 ಗಂಟೆ ಹೊತ್ತಿಗೆ ಒತ್ತಾಯದಿಂದ ತನ್ನ ಗಾಡಿಯ ಮೇಲೆ ಸಾಗಾಣಿಕೆದಾರನು ರೂಪಾಯಿ ಸುರುಳಿಯನ್ನು ಬೈಕ್‌ನ ಸೀಟಿನ ಕವರಿನಲ್ಲಿ ಇಟ್ಟು ಹೋಗಿರುತ್ತಾನೆ, ಇದನ್ನು ಏಕೆ ಇಟ್ಟಿರುವೆ ಎಂದು ಕೇಳಿದರೂ ತಿಳಿಸದೇ ಹೋಗಿರುತ್ತಾನೆ, ಸದರಿ ರಾಮಾ ನಾಯ್ಕರವರು ಈ ಹಿಂದೆ ತನ್ನಿಂದ ಸಾಲವಾಗಿ ಪಡೆದ ಹಣವಾಗಿರಬಹುದು ಎಂದು ತಿಳಿದು ಮುಂದಕ್ಕೆ ಮನೆಗೆ ಹೋಗುವಷ್ಟರಲ್ಲಿ ಇಬ್ಬರು ತನ್ನನ್ನು ಅಡ್ಡಗಟ್ಟಿ ಬೈಕ್ ನಿಲ್ಲಿಸಿ ನೇರವಾಗಿ ಐ.ಬಿ ಗೆ ಕರೆ ತಂದಿರುತ್ತಾರೆ, ಮುಂದಿನ ವಿಚಾರಗಳನ್ನು ತಮ್ಮಲ್ಲಿಗೆ ಕಾಗದಪತ್ರಗಳೊಂದಿಗೆ ಸಲ್ಲಿಸುತ್ತೇನೆ, ಸದರಿ ರಾಮಾ ನಾಯ್ಕರವರಿಗೆ ಕಳೆದ ಸಾಲಿನಿಂದ ಆಹಾರ ಸಾಗಾಣಿಕೆಯಲ್ಲಿ ಯಾವುದೇ ರಸೀದಿಗಳನ್ನು ಸಮರ್ಪಕವಾಗಿ ನೀಡದಿರುವ ಬಗ್ಗೆ ವಿವರವಾದ ನೋಟಿಸನ್ನು ಕಾಲ ಕಾಲಕ್ಕೆ ನೀಡಲಾಗಿದೆ ಎಂದು ಹೇಳಿಕೆಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ425 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿಯವರು ಈ ಬಾರಿ ಹಾಲಿನ ವಿತರಣೆ ರಸೀದಿಗಳನ್ನು ತಾಲೂಕು ಪಂಚಾಯತಿ ಕಚೇರಿಗೆ ನೀಡದೇ ತನ್ನ ಟೇಬಲ್ ಮೇಲೆ ಇಟ್ಟು ಹೋಗಿರುತ್ತಾನೆ, ಅವರು ಸಾಗಾಣಿಕೆದಾರ ಎನ್ನುವ ಬಗ್ಗೆ ಅಧಿಕೃತ ಆದೇಶವು ಬಂದಿರುವುದಿಲ್ಲ, ಆದರೂ ಕೆ ಎಂ ಎಫ್ ನೋಡಲ್ ಆಫೀಸರ್ ತಿಳಿಸಿದಂತೆ ಅವರು ನೀಡಿದ ರಸೀದಿಗಳನ್ನು ಒಂದೊಂದಾಗಿ ಪರಿಶೀಲಿಸಿ ಜಿಲ್ಲಾ ಕಚೇರಿಗೆ ಕೆ ಎಂ ಎಫ್ ನೋಡಲ್ ಆಫೀಸರ್ ಗೆ ವಿವರವಾದ

ಮೇಲ್ ಮಾಡಿರುತ್ತೇನೆ, ಸದರಿಯವರು ವಿತರಿಸಿರುವ ರಸೀದಿಗಳಲ್ಲಿ ಶೇಕಡಾ 30 ರಷ್ಟು ರಸೀದಿಗಳು ಸಮರ್ಪಕವಾಗಿಲ್ಲದಿರುವುದರಿಂದ ಯಾವ ಕಚೇರಿಗೆ ವರದಿ ಮಾಡಬೇಕು ಎನ್ನುವ ಬಗ್ಗೆ ತಾಲೂಕು ಕೆ ಎಂ ಎಫ್ ರವರಿಗೆ ಫೋನ್ ಮಾಡಿದರೂ ಸದರಿಯವರು ಸರಿಯಾಗಿ ಉತ್ತರಿಸಿ address ತಿಳಿಸಿರುವುದಿಲ್ಲ, ಕಾರಣ ಎಲ್ಲಾ ಮಾಹಿತಿಗಳನ್ನು ಜಿಲ್ಲಾ ಕಚೇರಿಗೆ ಕಳುಹಿಸಿರುತ್ತೇನೆ, ಶ್ರೀ ರಾಮಾ ನಾಯ್ಕರವರು ಆರ್ಥಿಕವಾಗಿ ಹಲವಾರು ಬಾರಿ ನನ್ನಿಂದ ಸಹಾಯ ಪಡೆದು ಇ.ಎಂ.ಡಿ. ಹಣವನ್ನು ನೀಡುವಾಗ ಸಹ ಸಾಲವನ್ನು ಪಡೆದಿದ್ದು ಅದೆ, ಸದರಿಯವರ ಕಾರ್ಯಕ್ಷಮತೆ ಸರಿಯಾಗಿ ಇಲ್ಲದಿರುವುದರಿಂದ ಈ ಬಾರಿಯ ಆಹಾರ ಸಾಗಾಣಿಕೆಯನ್ನು ಸದರಿಯವರಿಗೆ ನೀಡಿರುವುದಿಲ್ಲ, ಸದರಿಯವರ ಸಾಗಾಣಿಕೆದಾರರ ಕಾಗದಪತ್ರಗಳು ಯಾವುದೂ ಸಮರ್ಪಕವಾಗಿಲ್ಲದಿರುವುದರಿಂದ ಪರಿಶೀಲನೆಗೆ ವಿಶೇಷ ವೇಳೆಯನ್ನು ಪಡೆದು ಯೋಜನೆ ಅನುಷ್ಠಾನಕ್ಕೆ ಧಕ್ಕೆ ಬರಬಾರದು ಎನ್ನುವ ದೃಷ್ಟಿಯಿಂದ ಮೇಲಾಧಿಕಾರಿಯವರಿಂದ ತಕ್ಷಣ ಕಳುಹಿಸಬೇಕು ಎನ್ನುವ ದೃಷ್ಟಿಯಿಂದ ಆಗದೇ ಸದರಿಯವರು ನೀಡಿದ ರಸೀದಿಗಳನ್ನು ಪರಿಶೀಲನೆಗೆ ಕಳುಹಿಸಲಾಗಿದೆ, ಬಾಕಿ ವಿವರಗಳನ್ನು ದಾಖಲೆಗಳೊಂದಿಗೆ ಹಾಜರುಪಡಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆಂದು ತನ್ನ ಲಿಖಿತ ಹೇಳಿಕೆಯನ್ನು ಬರೆದುಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಒತ್ತಾಯದಿಂದ ಬರೆಸಿಕೊಂಡಿದ್ದಾರೆ.

ಪ್ರಶ್ನೆಃ426 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಹೇಳಿಕೆಯನ್ನು ಫಿರ್ಯಾದಿಯವರಿಗೆ ಓದಿ ಹೇಳಿದ್ದು ಅವರು ಸದರಿ ಹೇಳಿಕೆಯಲ್ಲಿ ನಮೂದಿಸಿರುವ ವಿಷಯವು ಸುಳ್ಳು ಇರುವುದಾಗಿ ಹೇಳಿದರು ಮತ್ತು ನಂತರ ಆರೋಪಿಯ ಸದರಿ ಹೇಳಿಕೆಯನ್ನು ತಾನು ತನ್ನ ವಶಕ್ಕೆ ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ427 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿಯಾದ ನಿನಗೆ ಉದ್ದೇಶಿಸಿ ಫಿರ್ಯಾದಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಲು ಕೇಳಿದಾಗ ಆರೋಪಿಯಾದ ನೀನು ಸದರಿ ಕಡತವು ತಮ್ಮ ಕಚೇರಿಯಲ್ಲಿಯೇ ಇರುವುದಾಗಿ ಸುಳ್ಳು ಹೇಳಿ ನಂತರ ತನ್ನ

ಹಿರೋ ಹೊಂಡಾ ಮೋಟಾರ್ ಸೈಕಲ್ ಸಂ. ಕೆಎ-47/ಕೆ-5710 ನೇದ್ದರ ಸೈಡ್ ಬಾಕ್ಸ್ ನಲ್ಲಿ ಇಟ್ಟಿರುವುದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ428 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಪಂಚರ ಸಮಕ್ಷಮ ಸದರಿ ಕಡತವನ್ನು ವಶಕ್ಕೆ ತೆಗೆದುಕೊಂಡು ಪರಿಶೀಲಿಸಿದಾಗ ಸಂಬಂಧಿಸಿದ ದಾಖಲಾತಿಗಳು 1 ರಿಂದ 29 ಹಾಳೆಗಳಿದ್ದು ಅವುಗಳ ಮೇಲೆ ತಾನು ಮತ್ತು ಪಂಚರು ಸಹಿ ಮಾಡಿ ಅವುಗಳ ನೆರಳಚ್ಚು ಪ್ರತಿ ಮಾಡಿ ಪಿರ್ಯಾದಿ ಕಡೆಯಿಂದ ದೃಢೀಕರಿಸಿಕೊಂಡು ಫಿರ್ಯಾದಿಗೆ ಸಂಬಂಧಿಸಿದ ಮೂಲ ಕಡತವನ್ನು ಮುಂದಿನ ಕ್ರಮದ ಕುರಿತು ಫಿರ್ಯಾದಿಯ ತಾಬಾಕ್ಕೆ ಕೊಟ್ಟಿರುತ್ತೇನೆಂದು ತನ್ನ ಲಿಖಿತ ಹೇಳಿಕೆಯನ್ನು ಬರೆದುಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ429 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಫಿರ್ಯಾದಿಗೆ ಈ ಮೊದಲು ಕೊಟ್ಟ ಡಿಜಿಟಲ್ ವಾಯ್ಸು ರೆಕಾರ್ಡರ್ ನ್ನು ಹಾಜರುಪಡಿಸಿಕೊಂಡು ಅದರಲ್ಲಿದ್ದ ಮುದ್ರಿತ ಧ್ವನಿಯನ್ನು ಆಲಿಸಿ ನೋಡಿದಾಗ ಅದರಲ್ಲಿದ್ದ ಸಂಭಾಷಣೆಯು ಸ್ಪಷ್ಟವಾಗಿ ಕೇಳುವಂತೆ ಇರದೇ ಅಸ್ಪಷ್ಟವಾಗಿತ್ತು ಮತ್ತು ತಾನು ಸದರಿ ಸಂಭಾಷಣೆಯನ್ನು ನಂತರದಲ್ಲಿ ಸಿ.ಡಿ. ಗೆ ಪರಿವರ್ತಿಸಿ ಪ್ರಕರಣಕ್ಕೆ ಅಳವಡಿಸಿಕೊಳ್ಳಲಾಗುವುದು ಎಂದು ಪಂಚರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ವಾಯ್ಸ್ ರೆಕಾರ್ಡರ್ ನಲ್ಲಿ ಇದ್ದ ಮುದ್ರಿತ ಧ್ವನಿ ಸಂಭಾಷಣೆ ಅಸ್ಪಷ್ಟವಾಗಿ ಇದ್ದದ್ದು ನಿಜ ಇರುತ್ತದೆ.

ಪ್ರಶ್ನೆಃ430 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಜಪ್ತು ಮಾಡಿದ ವಸ್ತು ಸಂ. 6 ರಿಂದ 9(ಎ) ವರೆಗಿನವುಗಳನ್ನು ತನ್ನ ವಶಕ್ಕೆ ಪಡೆದುಕೊಂಡು ಈ ಪ್ರಕರಣದಲ್ಲಿ ಜಪ್ತು ಮಾಡಿದ ವಸ್ತುಗಳಿಗೆ ಸೀಲು ಹಾಕಲು ಉಪಯೋಗಿಸಿದ A ಎಂಬ ಆಂಗ್ಲ ಅಕ್ಷರದ ಮಾದರಿ ಸೀಲನ್ನು ಪಂಚ-1 ರವರ ವಶಕ್ಕೆ ಕೊಟ್ಟು ಅದನ್ನು ನ್ಯಾಯಾಲಯದ ವಿಚಾರಣೆ ಕಾಲಕ್ಕೆ ಹಾಗೂ ತನಿಖಾಧಿಕಾರಿ ಕೇಳಿದಾಗ ಹಾಜರುಪಡಿಸಲು ತಿಳಿಸಿ ಕೊಟ್ಟಿದ್ದು ಅವರಿಂದ ಸ್ವೀಕೃತಿ

ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ431 ದೋಸಾ17/ಪ್ರಾಸಾ–13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ಪಂಚರೊಂದಿಗೆ ತಾಲೂಕು ಪಂಚಾಯತಿ ಕಚೇರಿಗೆ ತೆರಳಿ ಕಚೇರಿ ಆವಕ ವಹಿ, ಜಾವಕ ವಹಿ ಹಾಗೂ ಸಿಬ್ಬಂದಿಗಳ ಹಾಜರಾತಿ ಪುಸ್ತಕವನ್ನು ಪರಿಶೀಲನೆ ಮಾಡಿದೆ ಮತ್ತು ಅಲ್ಲಿ ಫಿರ್ಯಾದುದಾರನಿಗೆ ಸಂಬಂಧಿಸಿದ ಯಾವುದೇ ಅರ್ಜಿಯು ಕಚೇರಿಯಲ್ಲಿ ಸ್ವೀಕೃತವಾದ ಬಗ್ಗೆ ದಾಖಲಾತಿಗಳು ಸಿಕ್ಕಿರುವುದಿಲ್ಲ, ಅಲ್ಲದೇ ದಿನಾಂಕ 16.09.2013 ರಂದು ಆರೋಪಿಯಾದ ನಿನ್ನ ಕಚೇರಿಗೆ ಹಾಜರಾದ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ಆರೋಪಿಯಾದ ನಿನ್ನ ಸಹಿ ಇರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ432 ದೋಸಾ17/ಪ್ರಾಸಾ–13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫಿರ್ಯಾದುದಾರ ನಿಂತು ಆರೋಪಿಯಾದ ನಿನಗೆ ಹಣ ಕೊಟ್ಟ ಸ್ಥಳದ ಚೆಕ್ ಬಂದಿಯನ್ನು ಪಂಚನಾಮೆಯಲ್ಲಿ ನಮೂದಿಸಿದೆ ಮತ್ತು ಈ ಪಂಚನಾಮೆ ವೇಳೆ ಹಂತ ಹಂತವಾಗಿ ಛಾಯಾಚಿತ್ರವನ್ನು ದೋಸಾ–10 ರವರಿಂದ ಮಾಡಿಸಿದೆ ಮತ್ತು ತಾನು ಸ್ಥಳದಲ್ಲಿಯೇ ಕಚ್ಚಾ ನಕಾಶೆಯನ್ನು ತಯಾರಿಸಿದ್ದು ಅದಕ್ಕೆ ಪಂಚರು ಹಾಗೂ ತಾನು ಸಹಿ ಮಾಡಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ433 ದೋಸಾ17/ಪ್ರಾಸಾ–13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈ ಪಂಚನಾಮೆಯನ್ನು ದಿನಾಂಕ 16.09.2013 ರಂದು 20.40 ರಿಂದ ದಿನಾಂಕ 17.09.2013 ರಂದು 01.00 ಗಂಟೆವರೆಗೆ ಕುಮಟಾ ಪ್ರವಾಸಿ ಮಂದಿರದ ಕೊಠಡಿಯಲ್ಲಿ ಕುಳಿತು ಪಂಚರ ಹೇಳಿಕೆಯಂತೆ ತನ್ನ ಉಕ್ತ ಲೇಖನದಲ್ಲಿ ದೋಸಾ–9 ರವರು ಲ್ಯಾಪಟಾಪ್ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದರು ಮತ್ತು ಸದರಿ ಪಂಚನಾಮೆಗೆ ಪಂಚರು, ಫಿರ್ಯಾದಿ, ಬೆರಳಚ್ಚು ಮಾಡಿದ ಸಿಬ್ಬಂದಿ, ತನ್ನ ಸಹಿ ಇರುತ್ತವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:434 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ದಿನಾಂಕ 17.09.2013 ರಂದು ದಸ್ತಗಿರಿಯಾದ ಆರೋಪಿಯಾದ ನಿನ್ನನ್ನು ಬಂಧನ ಅರ್ಜಿ ಬರೆದು ಸಿಬ್ಬಂದಿ ಮೂಲಕ ನ್ಯಾಯಲಯದ ಮುಂದೆ ಹಾಜರುಪಡಿಸಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:435 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪ್ರಾಯೋಗಿಕ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿದ ವಸ್ತುಗಳನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:436 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 17.09.2013 ರಂದು ಸಾಕ್ಷಿದಾರರಾದ ದೋಸಾ-1 ರವರ ಮರು ಹೇಳಿಕೆ, ದೋಸಾ-2, 3, 5, 7, 8 ರವರ ಹೇಳಿಕೆಗಳನ್ನು, ದಿನಾಂಕ 18.09.2013 ರಂದು ಸಾಕ್ಷಿದಾರರಾದ ದೋಸಾ-9, 10, 11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:437 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 19.09.2013 ರಂದು ಆರೋಪಿಯಾದ ನಿನಗೆ ಸಂಬಂಧಿಸಿದ ಸೇವಾ ವಿವರಗಳ ಮಾಹಿತಿ ಕೊಡುವ ಕುರಿತು ಅವರ ಮೇಲಾಧಿಕಾರಿಗೆ ಪತ್ರವನ್ನು ಬರೆದಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆ:438 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿನಾಂಕ 20.09.2013 ರಂದು ದೋಸಾ-12 ರವರ ಹೇಳಿಕೆಯನ್ನು ಮತ್ತು ದಿನಾಂಕ 23.09.2013 ರಂದು ಸಾಕ್ಷಿದಾರರಾದ ದೋಸಾ-4, 5, 13 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು

ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ439 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದೋಸಾ-4 ರವರು ನಿ.ಪಿ-40 ರಂತೆ, ದೋಸಾ-5 ರವರು ನಿಪಿ-41 ರಂತೆ ಮತ್ತು ದೋಸಾ-13/ಪ್ರಾಸಾ-11 ಶೈಲಾ ಜಿ. ನಾಯ್ಕರವರು ನಿ.ಪಿ-42 ರಂತೆ ತನ್ನ ಮುಂದೆ ಹೇಳಿಕೆ ನೀಡಿದ್ದಾರೆಂದು, ದೋಸಾ-4, 5 ಮತ್ತು ದೋಸಾ-13/ಪ್ರಾಸಾ-11 ಶೈಲಾ ಜಿ. ನಾಯ್ಕರವರು ಆ ಪ್ರಕಾರ ಹೇಳಿಕೆ ನೀಡಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿರುವುದು ಸುಳ್ಳು ಇರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ440 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 27.09.2013 ರಂದು ಸದರಿ ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲುಗಳ ಪರೀಕ್ಷೆ ಕುರಿತು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ441 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01.10.2013 ರಂದು ದೋಸಾ-8 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ442 ದೋಸಾ17/ಪ್ರಾಸಾ-13 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ತನಗೆ ವರ್ಗಾವಣೆಯಾದ್ದರಿಂದ ಮುಂದಿನ ತನಿಖೆಯನ್ನು ದೋಸಾ-18 ರವರಿಗೆ ವಹಿಸಿಕೊಟ್ಟಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ443 **ದೋಸಾ16/ಪ್ರಾಸಾ-14 ಮಂಜುನಾಥ ವಿಷ್ಣು ಹೆಗಡೆ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು ದಿನಾಂಕ 01.09.2005 ರಿಂದ 19.05.2014 ರವರೆಗೆ ಕುಮಟಾದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನಾಗಿ ಲೋಕೋಪಯೋಗಿ

ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ444 ದೋಸಾ16/ಪ್ರಾಸಾ-14 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28.10.2013 ರಂದು ಕಾರವಾರ ಲೋಕಾಯುಕ್ತ ಪೊಲೀಸ್ ನವರಿಂದ ಈ ಪ್ರಕರಣದಲ್ಲಿ ಗುನ್ನಾ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಪತ್ರ ಬಂದಿತ್ತು, ಆಗ ತಾನು ಸಹಾಯಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ, ಆ ಪತ್ರ ತನ್ನ ಮೇಲಾಧಿಕಾರಿಗೆ ಬಂದಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ445 ದೋಸಾ16/ಪ್ರಾಸಾ-14 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತನಗೆ ಸದರಿ ನಕ್ಷೆಯನ್ನು ತಯಾರಿಸಿಕೊಡುವಂತೆ ಸ್ಥಳ ಪರಿಶೀಲನೆ ಮಾಡುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೂಚಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ446 ದೋಸಾ16/ಪ್ರಾಸಾ-14 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.12.2013 ರಂದು ತಾನು ಗುನ್ನಾ ಸ್ಥಳಕ್ಕೆ ಹೋದಾಗ ದರ್ಶನ ಶಾಂತಾರಾಮ ನಾಯ್ಕ ಎನ್ನುವವರು ತನಗೆ ಗುನ್ನಾ ಸ್ಥಳವನ್ನು ತೋರಿಸಿದಂತೆ ತಾನು ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ447 **ದೋಸಾ15/ಪ್ರಾಸಾ-15 ಶ್ಯಾಮಲಾ ತಿಮ್ಮಣ್ಣ ನಾಯಕ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತ್ ಕಾರವಾರದಲ್ಲಿ ಅಕ್ಷರ ದಾಸೋಹ ವಿಭಾಗದಲ್ಲಿ ಜಿಲ್ಲಾ ಶಿಕ್ಷಣಾಧಿಕಾರಿಯಾಗಿ 2012 ರಿಂದ 2016 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಹೌದು.

ಪ್ರಶ್ನೆಃ448 ದೋಸಾ15/ಪ್ರಾಸಾ–15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆಗಸ್ಟ್ 2013 ರಲ್ಲಿ ಕ್ಷೀರಭಾಗ್ಯ ಯೋಜನೆ ತಮ್ಮ ರಾಜ್ಯದಲ್ಲಿ ಜಾರಿಗೆ ಬಂತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ449 ದೋಸಾ15/ಪ್ರಾಸಾ–15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಕೆನೆಭರಿತ ಹಾಲನ್ನು ವಾರಕ್ಕೆ ಮೂರು ದಿನ ಉಚಿತವಾಗಿ ನೀಡಲಾಗುತ್ತದೆ ಮತ್ತು ತಮ್ಮ ಜಿಲ್ಲೆಯಲ್ಲಿ 11 ತಾಲೂಕುಗಳು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತಿತ್ತೆಂದು ಮತ್ತು ಅದು ಹಾಲಿನ ಪುಡಿ ಆಗಿತ್ತು, ಆ ಹಾಲಿನ ಪುಡಿ ಸರಬರಾಜನ್ನು ಕೆ ಎಂ ಎಫ್ ಧಾರವಾಡರವರಿಗೆ ಸರ್ಕಾರವೇ ನೀಡಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ450 ದೋಸಾ15/ಪ್ರಾಸಾ–15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಕೆ ಎಂ ಎಫ್ ಧಾರವಾಡರವರು ಎಲ್ಲಾ ಶಾಲೆಗಳಿಗೆ ಗುತ್ತಿಗೆದಾರರನ್ನು ನೇಮಕ ಮಾಡಿಕೊಂಡು ಅವರ ಮೂಲಕ ಹಾಲಿನ ಪುಡಿಯನ್ನು ವಿತರಣೆ ಮಾಡುತ್ತಿದ್ದರು ಮತ್ತು ಪ್ರತಿ ತಾಲೂಕಿಗೆ ಸಹಾಯಕ ನಿರ್ದೇಶಕರೊಬ್ಬರನ್ನು ಈ ಯೋಜನೆಯಡಿಯಲ್ಲಿ ನೇಮಕ ಮಾಡಲಾಗಿದೆ ಮತ್ತು ಅವರು ಬಿ ಶ್ರೇಣಿಯ ಮುಖ್ಯೋಪಾಧ್ಯಾಯರ ಶ್ರೇಣಿಯ ಅಧಿಕಾರಿಯಾಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಕೆ ಎಂ ಎಫ್ ಧಾರವಾಡರವರು ಎಲ್ಲಾ ಶಾಲೆಗಳಿಗೆ ಗುತ್ತಿಗೆದಾರರನ್ನು ನೇಮಕ ಮಾಡಿಕೊಂಡು ಅವರ ಮೂಲಕ ಹಾಲಿನ ಪುಡಿಯನ್ನು ವಿತರಣೆ ಮಾಡುತ್ತಿದ್ದರು ಎಂದು ಹೇಳಿರುವುದು ಸುಳ್ಳು. ಪ್ರತಿ ತಾಲೂಕಿಗೆ ಸಹಾಯಕ ನಿರ್ದೇಶಕರೊಬ್ಬರನ್ನು ಈ ಯೋಜನೆಯಡಿಯಲ್ಲಿ ನೇಮಕ ಮಾಡಲಾಗಿದೆ ಮತ್ತು ಅವರು ಬಿ ಶ್ರೇಣಿಯ ಮುಖ್ಯೋಪಾಧ್ಯಾಯರ ಶ್ರೇಣಿಯ ಅಧಿಕಾರಿಯಾಗಿರುತ್ತಾರೆ ಎನ್ನುವದು ನಿಜ ಇರುತ್ತದೆ.

ಪ್ರಶ್ನೆಃ451 ದೋಸಾ15/ಪ್ರಾಸಾ–15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದಲ್ಲಿರುವ ಆರೋಪಿ ನೀನು ಅವರಿಗೆ ಪರಿಚಯ ಇರುವುದಾಗಿ ಹಾಗೂ ನಿನ್ನ ಹೆಸರು ಗಣೇಶ ಅನಂತ ನಾಯ್ಕ ಮತ್ತು ನೀನು ಕುಮಟಾ ತಾಲೂಕಿನ ಸಹಾಯಕ ನಿರ್ದೇಶಕರಾಗಿ ಈ ಯೋಜನೆಯಡಿ ಕಾರ್ಯ

ನಿರ್ವಹಿಸುತ್ತಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಹೌದು.

ಪ್ರಶ್ನೆಃ452 ದೋಸಾ15/ಫ್ರಾಸಾ-15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ಕುಮಟಾ ತಾಲೂಕಿನಲ್ಲಿ ಸುಮಾರು 230 ಸರ್ಕಾರಿ ಶಾಲೆಗಳು ಇದ್ದವು ಮತ್ತು ಸುಮಾರು 25 ಕ್ಕಿಂತ ಹೆಚ್ಚು ಸರ್ಕಾರಿ ಅನುದಾನಿತ ಶಾಲೆಗಳು ಇದ್ದವು ಮತ್ತು ಆರೋಪಿಯಾದ ನೀನು ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಶಾಲೆಗಳಿಗೆ ಆಹಾರ ಧಾನ್ಯಗಳನ್ನು ವಿತರಣೆ ಮಾಡಿದ ಬಗ್ಗೆ ಹಾಗೂ ಹಾಲಿನ ಪುಡಿ ಶಾಲೆಗಳಿಗೆ ಸರಿಯಾಗಿ ಸರಬರಾಜು ಆದ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಆ ಸಮಯದಲ್ಲಿ ಕುಮಟಾ ತಾಲೂಕಿನಲ್ಲಿ ಸುಮಾರು 230 ಸರ್ಕಾರಿ ಶಾಲೆಗಳು ಇದ್ದವು ಮತ್ತು ಸುಮಾರು 25 ಕ್ಕಿಂತ ಹೆಚ್ಚು ಸರ್ಕಾರಿ ಅನುದಾನಿತ ಶಾಲೆಗಳು ಇದ್ದವು ಎನ್ನುವುದು ಸರಿಯಲ್ಲ, ಆದರೆ ನಾನು ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಶಾಲೆಗಳಿಗೆ ಆಹಾರ ಧಾನ್ಯಗಳನ್ನು ವಿತರಣೆ ಮಾಡಿದ ಬಗ್ಗೆ ಹಾಗೂ ಹಾಲಿನ ಪುಡಿ ಶಾಲೆಗಳಿಗೆ ಸರಿಯಾಗಿ ಸರಬರಾಜು ಆದ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿದ್ದೆ ಎಂದರೆ ಹೌದು, ಆಹಾರ ಸಾಗಾಣಿಕೆ ಬಗ್ಗೆ ಮಾತ್ರ ಆಗ ಮೇಲ್ವಿಚಾರಣೆ ಮಾಡುತ್ತಿದ್ದೆ ಕ್ಷಿರ ಭಾಗ್ಯ ಯೋಜನೆ ಇನ್ನು ಪ್ರಾರಂಭ ಆಗಿರಲಿಲ್ಲ.

ಪ್ರಶ್ನೆಃ453 ದೋಸಾ15/ಫ್ರಾಸಾ-15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಕೆ ಎಂ ಎಫ್ ಧಾರವಾಡರವರು ನೇರವಾಗಿ ಶಾಲೆಗಳಿಗೆ ಗುತ್ತಿಗೆದಾರರ ಮೂಲಕ ಹಾಲಿನ ಪುಡಿ ಸರಬರಾಜು ಮಾಡುತ್ತಿತ್ತು ಮತ್ತು ಗುತ್ತಿಗೆದಾರರು ಆಗ ಸರಬರಾಜು ಮಾಡಿದ ಶಾಲೆಯ ಮುಖ್ಯೋಪಾಧ್ಯಯರ ಕಡೆಯಿಂದ ಆ ಬಗ್ಗೆ ಸ್ವೀಕೃತಿ ಪಡೆದು ಆ ಸ್ವೀಕೃತಿ ಸರಿ ಇದೆ ಎಂಬ ಬಗ್ಗೆ ಆರೋಪಿಯಾದ ನಿನ್ನ ಕಡೆಯಿಂದ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ದೃಢೀಕರಣೆ ಮಾಡಿಸಿಕೊಂಡು ನಂತರ ಅದನ್ನು ಗುತ್ತಿಗೆದಾರರು ಕೆ ಎಂ ಎಫ್ ಸಂಸ್ಥೆಗೆ ಸಲ್ಲಿಸಬೇಕಾಗಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಇನ್ನು ಗುತ್ತಿಗೆದಾರರ ನೇಮಕ ಆದೇಶವೇ ಆಗಿರಲಿಲ್ಲ.

ಪ್ರಶ್ನೆಃ454 ದೋಸಾ15/ಫ್ರಾಸಾ-15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಕೆ ಎಂ ಎಫ್ ನಿಂದ ಬಿಲ್ಲಿನ ಹಣ ಜಿಲ್ಲಾ ಪಂಚಾಯತನ ಅಕ್ಷರ ದಾಸೋಹ ವಿಭಾಗಕ್ಕೆ

ಬರುತ್ತಿತ್ತು ಮತ್ತು ತಾನು ಸದರಿ ಬಿಲ್ಲುಗಳಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕರಿಂದ ಸಹಿ ಪಡೆದು ಆಡಳಿತಾತ್ಮಕ ಆದೇಶ ಪಡೆದು ಬಿಲ್ಲಿನ ಹಣವನ್ನು ಗುತ್ತಿಗೆದಾರರಿಗೆ ಪಾವತಿ ಮಾಡುತ್ತಿದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಇನ್ನು ಯೋಜನೆ ಪ್ರಾರಂಭವೇ ಆಗಿರಲಿಲ್ಲ, ಆದ್ದರಿಂದ ಈ ಪ್ರಶ್ನೆ ಉದ್ಭವ ಆಗುವುದಿಲ್ಲ.

ಪ್ರಶ್ನೆಃ455 ದೋಸಾ15/ಪ್ರಾಸಾ-15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈ ಕೇಸಿನ ಫಿರ್ಯಾದುದಾರ ರಾಮಾ ಬೀರಪ್ಪ ನಾಯ್ಕ ಮೇಲ್ಕಂಡ ಯೋಜನೆಯಡಿಯಲ್ಲಿ ಗುತ್ತಿಗೆದಾರ ಆಗಿದ್ದರು ಮತ್ತು ಕೆ ಎಂ ಎಫ್ ಸಂಸ್ಥೆ ಸದರಿ ಫಿರ್ಯಾದುದಾರನಿಗೆ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಹಾಲಿನ ಪುಡಿ ವಿತರಣೆ ಗುತ್ತಿಗೆಯನ್ನು ನೀಡಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಪಿರ್ಯಾದುದಾರ ಸಾಗಾಣಿಕೆದಾರ ಆಗಿರಲಿಲ್ಲ ಎಂದು ನಾನು ದಾಖಲೆ ಕೊಟ್ಟಿದ್ದೇನೆ.

ಪ್ರಶ್ನೆಃ456 ದೋಸಾ15/ಪ್ರಾಸಾ-15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫಿರ್ಯಾದುದಾರರಿಗೆ ಕುಮಟಾ ತಾಲೂಕಿಗೆ ಆ ರೀತಿ ಗುತ್ತಿಗೆ ನೀಡಿದ್ದಾರೆ ಎಂದು ನಂತರ ತಾತ್ಕಾಲಿಕ ಆದೇಶವನ್ನು ಕೆ ಎಂ ಎಫ್ ಸಂಸ್ಥೆಯವರು ಕಳುಹಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ457 ದೋಸಾ15/ಪ್ರಾಸಾ-15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಫಿರ್ಯಾದುದಾರನಿಗೆ ಹಾಲು ಸರಬರಾಜು ಗುತ್ತಿಗೆ ಕೊಟ್ಟಿದ್ದ ವಿಚಾರ ತನಗೆ ಮೊದಲು ಗೊತ್ತಿರಲಿಲ್ಲ, ನಂತರ ತನಗೆ ಗೊತ್ತಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಫಿರ್ಯಾದುದಾರನಿಗೆ ಹಾಲು ಸರಬರಾಜು ಗುತ್ತಿಗೆ ಕೊಟ್ಟಿದ್ದ ವಿಚಾರ ಅವರಿಗೆ ಗೊತ್ತಾಗಿರಲಿಲ್ಲ ಎಂದ ಮೇಲೆ ನನಗೆ ಹೇಗೆ ಗೊತ್ತಾಗುತ್ತದೆ.

ಪ್ರಶ್ನೆಃ458 ದೋಸಾ15/ಪ್ರಾಸಾ-15 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 17.09.2013 ರಂದು ಆರೋಪಿಯಾದ ನಿನ್ನನ್ನು ಲೋಕಾಯುಕ್ತ ಪೊಲೀಸ್‌ನವರು ಬಂಧಿಸಿದ ವಿಚಾರ ತನಗೆ ಫೋನ್ ಮೂಲಕ ತಿಳಿಸಿದರು ಮತ್ತು ಆ

ದಿನದ ಹಿಂದಿನ ರಾತ್ರಿ ಅವರನ್ನು ಬಂಧಿಸಿದ್ದಾರೆ ಎಂದು ತನಗೆ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ನನಗೆ ಗೊತ್ತಿಲ್ಲ.

ಪ್ರಶ್ನೆಃ459 **ದೋಸಾ14/ಪ್ರಾಸಾ-16 ರಾಕೇಶ್ವರ ಕೃಷ್ಣಾ ಪಟಗಾರ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು 2009 ರಿಂದ 2014 ರವರೆಗೆ ಅಕ್ಷರ ದಾಸೋಹ ವಿಭಾಗ, ತಾಲೂಕು ಪಂಚಾಯತಿ ಕುಮಟಾದಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಪ್ರಾಸಾ-16 ನನ್ನ ಅಧೀನದಲ್ಲಿ ಕೆಲಸ ಮಾಡುತ್ತಿರಲಿಲ್ಲ, ತಾಲೂಕು ಪಂಚಾಯತಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರ ಅಧೀನದಲ್ಲಿ ಕೆಲಸ ಮಾಡುತ್ತಿದ್ದ.

ಪ್ರಶ್ನೆಃ460 ದೋಸಾ14/ಪ್ರಾಸಾ-16 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿಯಾದ ನಿನ್ನ ಪರಿಚಯವಿದ್ದು, ನೀನು ಅವರ ಕಚೇರಿಯಲ್ಲಿ ಅವರಿಗೆ ಅಧಿಕಾರಿಯಾಗಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ನಾನು ಆ ವಿಭಾಗಕ್ಕೆ ಅಧಿಕಾರಿಯಾಗಿರಲಿಲ್ಲ, ಕಾರ್ಯನಿರ್ವಾಹಕ ಅಧಿಕಾರಿಯವರು ಅಲ್ಲಿ ಅಧಿಕಾರಿಯಾಗಿದ್ದರು, ನಾನು ಅಲ್ಲಿ ಸಂಯೋಜಕ ಆಗಿದ್ದೆ.

ಪ್ರಶ್ನೆಃ461 ದೋಸಾ14/ಪ್ರಾಸಾ-16 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತನಗೆ ಫಿರ್ಯಾದುದಾರ ರಾಮಾ ಬೀರಪ್ಪ ನಾಯ್ಕ ಗೊತ್ತೆಂದು ಮತ್ತು ಫಿರ್ಯಾದುದಾರ ತಾನು ಆ ಕಚೇರಿಗೆ ಬಂದ ಎರಡು ವರ್ಷದ ನಂತರದಿಂದ ಶಾಲೆಗಳಿಗೆ ಕುಮಟಾದ ಉಗ್ರಾಣದಿಂದ / ಆಹಾರ ಗೋದಾಮಿನಿಂದ ಅಕ್ಕಿ, ಬೆಳೆ, ಎಣ್ಣೆ ಇತ್ಯಾದಿಯನ್ನು ಹಾಲನ್ನು ಸರಬರಾಜು ಮಾಡುತ್ತಿದ್ದ ಮತ್ತು ಹಾಲಿನ ಪುಡಿಯನ್ನು ಕೆ ಎಂ ಎಫ್ ಸಂಸ್ಥೆ ಸರಬರಾಜು ಮಾಡುತ್ತಿತ್ತು, ಫಿರ್ಯಾದಿ ಅದನ್ನು ವಿತರಣೆ ಮಾಡುತ್ತಿದ್ದ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಆಹಾರ ಧಾನ್ಯ ಸರಬರಾಜಜು ಮಾತ್ರ ಪಿರ್ಯಾದುದಾರ ಮಾಡುತ್ತಿದ್ದ, ಹಾಲಿನ ಪುಡಿ ವಿತರಣೆ ಪ್ರಾರಂಭ ಆಗಿರಲಿಲ್ಲ.

ಪ್ರಶ್ನೆಃ462 ದೋಸಾ14/ಪ್ರಾಸಾ-16 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು

ಫಿರ್ಯಾದಿ ಜೊತೆ ಹಾಗೂ ಆರೋಪಿಯಾದ ನಿನ್ನ ಜೊತೆ ಮಾತನಾಡುತ್ತಿದ್ದೆ ಮತ್ತು ತನಗೆ ಅವರಿಬ್ಬರ ಧ್ವನಿ ಪರಿಚಯ ಇತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು, ಸಾಕ್ಷಿ ಆ ರೀತಿ ಸಾಕ್ಷ್ಯದಲ್ಲಿ ಹೇಳಿಲ್ಲ.

ಪ್ರಶ್ನೆಃ463 ದೋಸಾ14/ಪ್ರಾಸಾ-16 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18.01.2014 ರಂದು ಕಾರವಾರದ ಲೋಕಾಯುಕ್ತ ಕಚೇರಿಗೆ ತನ್ನ ಮೇಲಾಧಿಕಾರಿಯವರು ತನ್ನನ್ನು ಕಳುಹಿಸಿದರು, ಅಲ್ಲಿಗೆ ಹೋದಾಗ ಲೋಕಾಯುಕ್ತ ಕಚೇರಿಯಲ್ಲಿ ಇಬ್ಬರು ಮೂವರು ಇದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ464 ದೋಸಾ14/ಪ್ರಾಸಾ-16 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ಲೋಕಾಯುಕ್ತ ಕಚೇರಿಯಲ್ಲಿ ಸಿ.ಡಿ. ಚಾಲು ಮಾಡಿ ಅದರಲ್ಲಿದ್ದ ಸಂಭಾಷಣೆಯನ್ನು ತನಗೆ ಕೇಳಿಸಿದರು ಮತ್ತು ತಾನು ಆ ಸಂಭಾಷಣೆ ಕೇಳಿ ಅದರಲ್ಲಿ ಧ್ವನಿಯನ್ನು ಇವರದ್ದೇ ಇರಬಹುದು ಎಂದು ಗುರುತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ465 ದೋಸಾ14/ಪ್ರಾಸಾ-16 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದರಲ್ಲಿ ಒಂದು ಧ್ವನಿ ತನ್ನ ಪ್ರಕಾರ ಫಿರ್ಯಾದುದಾರನದ್ದಾಗಿತ್ತು ಹಾಗೂ ಅದರಲ್ಲಿದ್ದ ಮತ್ತೊಂದು ಧ್ವನಿ ಆರೋಪಿ ಗಣೇಶ ನಾಯ್ಕರವರದ್ದಾಗಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ466 ದೋಸಾ14/ಪ್ರಾಸಾ-16 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಲ್ಯಾಪಟಾಪ್ ಮತ್ತು ವಿ.ಸಿ. ಮಾನಿಟರ್ ಮೂಲಕ ಸದರಿ ಸಿ.ಡಿ. ಯನ್ನು ಚಾಲು ಮಾಡಿ ಅದರಲ್ಲಿರುವ ಸಂಭಾಷಣೆಯನ್ನು ತೆರೆದ ನ್ಯಾಯಾಲಯದಲ್ಲಿ ಕೇಳಿಸಿದ್ದು ಅದುವೇ ತನಗೆ ಲೋಕಾಯುಕ್ತ ಕಚೇರಿಯಲ್ಲಿ ಕೇಳಿಸಿದ ಮೇಲೆ ಹೇಳಿದ ಸಿ.ಡಿ. ಸಂಭಾಷಣೆಯಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ467 **ದೋಸಾ 20/ಫ್ರಾಸಾ-17 ವೀರಣ್ಣ ಗುರುಸಿದ್ದಪ್ಪ ತುರುಮುರಿ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು ಜುಲೈ 2014 ರಿಂದ ಫೆಬ್ರವರಿ 2018 ರವರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡದಲ್ಲಿ ಹೆಚ್ಚುವರಿ ಆಯುಕ್ತನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ468 ದೋಸಾ 20/ಫ್ರಾಸಾ-17 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತನಗೆ ಸೆಪ್ಟೆಂಬರ್ 2014 ರಲ್ಲಿ ಜಿಲ್ಲಾ ಪಂಚಾಯತ್ ಕಾರವಾರದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಂದ ಗಣೇಶ ಅನಂತ ನಾಯ್ಕು, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಯೋಜನೆ ತಾಲೂಕು ಪಂಚಾಯತಿ ಕುಮಟಾರವರ ವಿರುದ್ಧ ಲೋಕಾಯುಕ್ತರವರು ಟ್ರ್ಯಾಪ್ ಪ್ರಕರಣ ದಾಖಲು ಮಾಡಿದ್ದಾರೆ ಎಂದು ಅವರು ಟ್ರ್ಯಾಪ್ ಆಗಿರುವುದರಿಂದ ಅವರ ವಿರುದ್ಧ ಅಭಿಯೋಜನೆ ಮಾಡಲು ಅಭಿಯೋಜನಾ ಮಂಜೂರಾತಿ ನೀಡಬೇಕೆಂದು ಪತ್ರ ಬಂದಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ469 ದೋಸಾ 20/ಫ್ರಾಸಾ-17 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಹಾಲಿನ ಪುಡಿ ಸರಬರಾಜು ಮಾಡುವಾಗ ಸಾಗಣೆ ಮಾಡುವವರ ಕಡೆಯಿಂದ ಮೇಲ್ಕಂಡ ಆರೋಪಿ ನೀನು ಲಂಚ ಕೇಳಿದ್ದರು ಆ ಸಂಬಂಧದಲ್ಲಿ ಟ್ರ್ಯಾಪ್ ಆಗಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ470 ದೋಸಾ 20/ಫ್ರಾಸಾ-17 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಭಿಯೋಜನಾ ಮಂಜೂರಾತಿ ಕೋರಿ ಬರೆದಿದ್ದ ಪತ್ರದ ಜೊತೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ತನಗೆ ಕಳುಹಿಸಿದ್ದರು, ತಾನು ಆ ದಾಖಲಾತಿಗಳನ್ನೆಲ್ಲಾ ಪರಿಶೀಲನೆ ಮಾಡಿ, ಆ ದಾಖಲಾತಿಗಳ ಪರಿಶೀಲನೆಯಿಂದ ಮೇಲ್ನೋಟಕ್ಕೆ ಆರೋಪಿಯಾದ ನಿನ್ನ ವಿರುದ್ಧ ಲಂಚ ನಿರೋಧಕ ಕಾಯ್ದೆ 1988 ರ ಕಲಂ 7, 13(1)(ಡಿ) ಸಹ ಕಲಂ 13(2) ರಡಿಯಲ್ಲಿ ಆರೋಪ ಸಾಬೀತಾಗಿರುವುದು ತನಗೆ ಮನವರಿಕೆಯಾಗಿದ್ದರಿಂದ ತಾನು ಅಭಿಯೋಜನಾ ಮಂಜೂರಾತಿ

ಆದೇಶ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಅಭಿಯೋಜನಾ ಮಂಜೂರಾತಿ ಅಧಿಕಾರ ಅವರಿಗೆ ಇರಲಿಲ್ಲ.

ಪ್ರಶ್ನೆಃ471 ದೋಸಾ 20/ಪ್ರಾಸಾ-17 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸರ್ಕಾರದ ದಿನಾಂಕ 22.02.2008 ರ ಸುತ್ತೋಲೆ ಸಂ. ಈಡಿ.250 ಡಿಪಿಇ 2006 ರ ಅಡಿಯಲ್ಲಿ ಅಭಿಯೋಜನಾ ಮಂಜೂರಾತಿ ನೀಡಲು ತಾನು ಸಕ್ಷಮ ಅಧಿಕಾರಿಯಾಗಿದ್ದೆ ಎಂದು ಸಾಕ್ಷಿಯು ಆ ಸುತ್ತೋಲೆಯ ಒಂದು ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ದಿನಾಂಕ 29.01.2008 ರ ಇಂಗ್ಲಿಷನಲ್ಲಿರುವ ಸರ್ಕಾರದ ಅದೇಶವನ್ನು ತಿರುಚಿ ದಿನಾಂಕ 22.02.2008 ರ ಕನ್ನಡದ ಆದೇಶದಲ್ಲಿ ಅಭಿಯೋಜನಾ ಮಂಜೂರಾತಿ ಅಧಿಕಾರ ಇಲ್ಲದಿರುವುದರಿಂದ ಇದೆ ಎಂದು ಹೇಳಿರುತ್ತಾರೆ. ಅವರಿಗೆ ಅಭಿಯೋಜನಾ ಮಂಜೂರಾತಿ ಅಧಿಕಾರ ಇರುವುದಿಲ್ಲ.

ಪ್ರಶ್ನೆಃ472 **ದೋಸಾ 18/ಪ್ರಾಸಾ-18 ಟಿ. ನಾಗೇಶ ಶೆಟ್ಟಿ ಇವರು ತಮ್ಮ ಸಾಕ್ಷ್ಯದಲ್ಲಿ,** ತಾನು ದಿನಾಂಕ 15.10.2013 ರಿಂದ 26.11.2014 ರವರೆಗೆ ಕಾರವಾರ ಲೋಕಾಯುಕ್ತ ಠಾಣೆಯಲ್ಲಿ ಆರಕ್ಷಕ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ473 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 15.10.2013 ರಂದು ಈ ಕೇಸಿನ ಕಡತವನ್ನು ಆರಕ್ಷಕ ಉಪಾಧೀಕ್ಷಕ ದೋಸಾ-17 ರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲನೆ ಮಾಡಿ ಕೃತ್ಯ ಸ್ಥಳಕ್ಕೆ ಭೇಟಿ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ474 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28.10.2013 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಕುಮಟಾರವರಿಗೆ ಕೃತ್ಯ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಪತ್ರವನ್ನು ಬರೆದಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ475 ದೋಸಾ 18/ಪ್ರಾಸಾ–18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.12.2013 ರಂದು ಪಂಚರಾದ ದೋಸಾ–2 ರವರನ್ನು ದಿನಾಂಕ 04.12.2013 ರಂದು ತನಿಖೆ ಬಗ್ಗೆ ತನ್ನ ಕಚೇರಿಗೆ ಕಳುಹಿಸಿಕೊಡುವಂತೆ ಸಹಾಯಕ ವಾಣಿಜ್ಯ ತೆರಿಗೆ ಆಯುಕ್ತರು ಕಾರವಾರರವರಿಗೆ ಪತ್ರವನ್ನು ಬರೆದಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ476 ದೋಸಾ 18/ಪ್ರಾಸಾ–18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.12.2013 ರಂದು ಮಂಜುನಾಥ ಹೆಗಡೆ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಕುಮಟಾರವರು ಸ್ಥಳದ ನಕಾಶೆಯನ್ನು ತಯಾರಿಸಿದರು ಮತ್ತು ಆ ಸಮಯದಲ್ಲಿ ದೋಸಾ–2 ರವರು ಸ್ಥಳವನ್ನು ಅವರಿಗೆ ತೋರಿಸಿದರು ಮತ್ತು ದೋಸಾ–2 ರವರ ಮರುಹೇಳಿಕೆಯನ್ನು ಅದೇ ದಿನ ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ477 ದೋಸಾ 18/ಪ್ರಾಸಾ–18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 26.12.2013 ರಂದು ತಮ್ಮ ಠಾಣೆಯ ಮುಖ್ಯ ಪೇದೆ ದೋಸಾ–6 ರವರು ಧಾರವಾಡ ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ತಂದು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡೆ ಹಾಗೂ ದೋಸಾ–6 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ478 ದೋಸಾ 18/ಪ್ರಾಸಾ–18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 17.01.2014 ರಂದು ಪಂಚರಾದ ದೋಸಾ–2 ಮತ್ತು ದೋಸಾ–3 ರವರನ್ನು ದಿನಾಂಕ 18.01.2014 ರಂದು ತನಿಖೆ ಕುರಿತು ಠಾಣೆಗೆ ಕಳುಹಿಸಿಕೊಡುವಂತೆ ಅವರ ಇಲಾಖೆಯ ಮುಖ್ಯಸ್ಥರಿಗೆ ಪತ್ರವನ್ನು ಬರೆದು ಕಳುಹಿಸಿರುತ್ತೇನೆಂದು ಸಾಕ್ಷ್ಯ

ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ479 ದೋಸಾ 18/ಫ್ರಾಸಾ–18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18.01.2014 ರಂದು ಈ ಕೇಸಿನ ಫಿರ್ಯಾದಿ ಟ್ರ್ಯಾಪ್ ಕಾಲಕ್ಕಿಂತ ಮುಂಚೆ ಆರೋಪಿಯೊಂದಿಗೆ ನಡೆಸಿದ ಮೊಬೈಲ್ ದೂರವಾಣಿ ಸಂಭಾಷಣೆಯನ್ನು ಸಿ.ಡಿ. ಗೆ ಪರಿವರ್ತಿಸಿ ಈ ದಿನ ಠಾಣೆಯಲ್ಲಿ ಹಾಜರುಪಡಿಸಿದ್ದು, ಅದನ್ನು ಪಂಚರ ಸಮಕ್ಷಮ ಠಾಣೆಯ ಲ್ಯಾಪಟಾಪ್ ನಲ್ಲಿ ಹಾಕಿ ಆಲಿಸಿ ಪಂಚನಾಮೆಯನ್ನು ತಯಾರಿಸಿರುತ್ತೇನೆಂದು ಮತ್ತು ಅದರಲ್ಲಿ 7 ನಿಮಿಷ 16 ಸೆಕೆಂಡ್ ನ ಸಂಭಾಷಣೆ ಇತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ480 ದೋಸಾ 18/ಫ್ರಾಸಾ–18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ದೋಸಾ–2 ರವರಿಗೆ ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ನೀಡಿದ A ಆಂಗ್ಲ ಅಕ್ಷರದ ಸೀಲ್ ಅನ್ನು ಅವರು ಆ ಸಮಯದಲ್ಲಿ ಹಾಜರುಪಡಿಸಿದ್ದು ಸದರಿ ಸಿ.ಡಿ. ಯನ್ನು ಪ್ಯಾಕ್ ಮಾಡಿ ಅದರ ಮೇಲೆ A ಆಂಗ್ಲ ಅಕ್ಷರದ ಸೀಲ್ ನಿಂದ ಸೀಲ್ ಮಾಡಿ ಅದರ ಮೇಲೆ ಪಂಚರು, ಫಿರ್ಯಾದಿ ಹಾಗೂ ತನ್ನ ಸಹಿಯನ್ನು ಮಾಡಿ ವಸ್ತು ಸಂ. 10 ಎಂದು ಗುರುತಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ481 ದೋಸಾ 18/ಫ್ರಾಸಾ–18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಒಟ್ಟು ಎರಡು ಸಿ.ಡಿ. ತಯಾರಿಸಿ, ಒಂದು ಸಿ.ಡಿ.ಯನ್ನು ಕಡತದಲ್ಲಿ ಇಟ್ಟುಕೊಂಡೆ ಮತ್ತು ಸದರಿ ಪಂಚನಾಮೆಯನ್ನು ಠಾಣೆಯಲ್ಲಿ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.30 ಗಂಟೆವರೆಗೆ ತಯಾರಿಸಿದ್ದು, ಠಾಣೆಯ ಸಿ ಪಿ ಸಿ ದೋಸಾ–9 ರವರು ಲ್ಯಾಪಟಾಪ್ ನಲ್ಲಿ ಬೆರಳಚ್ಚು ಮಾಡಿದರು ಮತ್ತು ಸದರಿ ಸಿ.ಡಿ.ಯನ್ನು ಠಾಣೆಯ ಮಾಲುಪಟ್ಟಿ ಸಂ. 1/2014 ರಲ್ಲಿ ಅಳವಡಿಸಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ482 ದೋಸಾ 18/ಫ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 18.01.2014 ರಂದು ಆಪಾದಿತನ ಮೊಬೈಲ್ ದೂರವಾಣಿ ಸಂಖ್ಯೆ 9448611195 ಮತ್ತು ಫಿರ್ಯಾದಿ ಮೊಬೈಲ್ ದೂರವಾಣಿ ಸಂಖ್ಯೆ 9480562001 ರ ಗ್ರಾಹಕರ ಹೆಸರು, ಪೂರ್ಣ ವಿಳಾಸ ಹಾಗೂ ದಿನಾಂಕ 12.09.2013 ರಿಂದ 17.09.2013 ರವರೆಗಿನ ಸಿಡಿಆರ್ ಮಾಹಿತಿಯನ್ನು ಕೇಳಿ Sub Divisional Vigilance GMEP, Karwar ರವರಿಗೆ ಪತ್ರವನ್ನು ಬರೆದಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ483 ದೋಸಾ 18/ಫ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿಃ 18.01.2014 ರಂದು ಫಿರ್ಯಾದಿ ರಾಮಾ ಬೀರಪ್ಪ ನಾಯ್ಕ ಹಾಗೂ ಪಂಚರಾದ ದರ್ಶನ ಮತ್ತು ದಿವಾಕರ ಇವರುಗಳ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ484 ದೋಸಾ 18/ಫ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಅಕ್ಷರ ದಾಸೋಹ, ತಾಲೂಕು ಪಂಚಾಯತಿ ಕುಮಟಾದಲ್ಲಿ ಪ್ರ.ದ.ಸ ಆಗಿರುವ ರಾಕೇಶ್ವರ ಕೃಷ್ಣ ಪಟಗಾರ ಇವರಿಗೆ ಆಪಾದಿತ ಮತ್ತು ಫಿರ್ಯಾದಿಯ ಮೊಬೈಲ್ ಸಂಭಾಷಣೆಯ ಧ್ವನಿ ಸುರುಳಿಯನ್ನು ಗುರುತಿಸಿದ ಬಗ್ಗೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ485 ದೋಸಾ 18/ಫ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 21.01.2014 ರಂದು ಆಪಾದಿತ ಗಣೇಶ ಅನಂತ ನಾಯ್ಕ ಇವರ ನೇಮಕಾತಿ ಆದೇಶದ ದೃಢೀಕೃತ ಪ್ರತಿಯನ್ನು ಒದಗಿಸುವಂತೆ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ಕನ್ನಡ ರವರಿಗೆ ಪತ್ರವನ್ನು ಬರೆದಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ486 ದೋಸಾ 18/ಫ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ

ಇಲಾಖೆ, ಕುಮಟಾ ರವರಿಂದ ಸ್ಥಳದ ನಕಾಶೆಯನ್ನು ಆರು ಪ್ರತಿಯಲ್ಲಿ ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ487 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 03.02.2014 ರಂದು ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರವಾರ ರವರಿಂದ ನೇಮಕಾತಿ ಆದೇಶದ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ488 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 12.02.2014 ರಂದು ಕಾರವಾರ ದೂರವಾಣಿ ಇಲಾಖೆಯಿಂದ ಎರಡು ಮೊಬೈಲ್ ಸಿಮ್ ನ ಗ್ರಾಹಕರ ಹೆಸರು ವಿಳಾಸ ಹಾಗೂ ಸಿಡಿಆರ್ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ489 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 14.02.2014 ರಂದು ಜಿಲ್ಲಾ ಶಿಕ್ಷಣ ಅಧಿಕಾರಿ ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ, ಕಾರವಾರ ಶ್ಯಾಮಲಾ ಟಿ ನಾಯಕ ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ490 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಆಪಾದಿತರ ಸಕ್ಷಮ ಪ್ರಾಧಿಕಾರದಿಂದ ಅಭಿಯೋಜನಾ ಮಂಜೂರಾತಿ ಪಡೆಯಲು ಶಿಫಾರಸ್ಸು ಮಾಡುವಂತೆ ಕೋರಿ ಲೋಕಾಯುಕ್ತ ಇಲಾಖೆಯ ಮೇಲಾಧಿಕಾರಿಗಳಿಗೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ491 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 22.04.2014 ರಂದು ವ್ಯವಸ್ಥಾಪನಾ ನಿರ್ದೇಶಕರು ಧಾರವಾಡ ಹಾಲು

ಉತ್ಪಾದಕರ ಸಹಕಾರಿ ಸಂಘ ನಿಯಮಿತ ಇವರಿಂದ ಫಿರ್ಯಾದಿಯವರು ಹಾಲಿನ ಪುಡಿ ಸರಬರಾಜಿನ ಬಗ್ಗೆ ತಾತ್ಕಾಲಿಕ ಗುತ್ತಿಗೆ ಪಡೆದ ಬಗ್ಗೆ ಆದೇಶದ ದೃಢೀಕೃತ ಪ್ರತಿಯನ್ನು ಕೇಳಿ ಪತ್ರ ಬರೆದಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ492 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 13.05.2014 ರಂದು ಸದರಿಯವರಿಂದ ಹಾಲಿನ ಪುಡಿ ಸರಬರಾಜು ತಾತ್ಕಾಲಿಕ ಗುತ್ತಿಗೆ ಆದೇಶದ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ493 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 26.11.2014 ರಂದು ನನಗೆ ಕಾರವಾರ ಠಾಣೆಯಿಂದ ವರ್ಗಾವಣೆಯಾಗಿದ್ದರಿಂದ ಡಿ.ವಾಯ್.ಎಸ್.ಪಿ ಉಮಾ ಪ್ರಶಾಂತ ರವರಿಗೆ ಕಡತವನ್ನು ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ494 ದೋಸಾ 18/ಪ್ರಾಸಾ-18 ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತೆರೆದ ನ್ಯಾಯಾಲಯದಲ್ಲಿ ಲ್ಯಾಪ್ ಟಾಪ್ ಮತ್ತು ವಿಸಿ ಮಾನಿಟರ್ ಮೂಲಕ ಮು.ಮಾ-11 ಸಿಡಿಯನ್ನು ಚಾಲು ಮಾಡಿ ಅದರಲ್ಲಿರುವ ಸಂಭಾಷಣೆಯನ್ನು ಕೇಳಿಸಿದ್ದು, ಅದು ತಾನು ಕೇಳಿದ ಸಂಭಾಷಣೆಯ ಸಿಡಿ ಆಗಿದೆ ಮತ್ತು ಅದರಲ್ಲಿ ಫಿರ್ಯಾದಿ ಮತ್ತು ಆರೋಪಿ ನಡುವೆ ಟ್ರ್ಯಾಪ್ ಆಗುವುದಕ್ಕೆ 4-5 ದಿನ ಮೊದಲು ಆಗಿರುವ ಸಂಭಾಷಣೆ ಇದೆ ಮತ್ತು ಅದರಲ್ಲಿ ಆರೋಪಿ ಲಂಚಕ್ಕೆ ಭೇಡಿಕೆ ಇಟ್ಟಿರುವ ಸಂಭಾಷಣೆ ಇದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ.?

ಉತ್ತರಃ ಸುಳ್ಳು.

ಪ್ರಶ್ನೆಃ495 ನೀವು ಇನ್ನೂ ಏನಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರು ಪಡಿಸುತ್ತೀರಾ?

ಉತ್ತರಃ ಸಾಕ್ಷ್ಯ ಹಾಜರುಪಡಿಸುತ್ತೇನೆ.

ಪ್ರಶ್ನೆಃ496 ಈ ಕೇಸಿನ ವಿಚಾರದಲ್ಲಿ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರಃ 2013 ಕ್ಕಿಂತ ಮುಂಚೆ ಆಹಾರ ಸಾಗಾಣಿಕೆ ಮಾತ್ರ ಪಿರ್ಯಾದುದಾರರಿಗೆ ನೀಡಲಾಗಿತ್ತು. ಆಗ ಪಿರ್ಯಾದುದಾರ ಆಹಾರ ದಾನ್ಯ ಸರಿಯಾಗಿ ವಿತರಣೆ ಮಾಡದೇ ರಶೀದಿಗಳನ್ನು ಕೊಡದೇ ಇದ್ದ ಕಾರಣ ನಿರಂತರವಾಗಿ ಅವರಿಗೆ ನೋಟಿಸುಗಳನ್ನು ನೀಡಿದ್ದೆ. ಅದರ ವೈಶ್ಯಮ್ಯದಿಂದ ಹಾಗೂ ಪಿರ್ಯಾದುದಾರನಿಗೆ ಆ ವರ್ಷದಲ್ಲಿ ಟೆಂಡರ್ ರದ್ದು ಆಯಿತು ಮತ್ತು ಪಿರ್ಯಾದುದಾರ ಶಾಲೆಗೆ ಹಂಚಬೇಕಾಗಿದ್ದ ಆಹಾರ ದಾನ್ಯವನ್ನು ಪೇಟೆಯಲ್ಲಿ ಎಲ್ಲಿ ಎಲ್ಲಿಯೋ ಅಂಗಡಿಗಳಿಗೆ ಬೇಕರಿಗಳಿಗೆ ಹಂಚುತ್ತಿದ್ದ. ಈ ಸಂಬಂಧದಲ್ಲಿ ಪಿರ್ಯಾದಿ ಮೇಲೆ ಅಪವಾದ ಇತ್ತು , ಕ್ರಿಮಿನಲ್ ಕೇಸು ಆಗಿತ್ತು. ತಹಶೀಲ್ದಾರರವರು ಪಿರ್ಯಾದಿ ವಿರುದ್ಧ ಪ್ರ.ವ.ವ ನೊಂದಾಯಿಸಿದ್ದರು. ಇದೇ ಸಮಯದಲ್ಲಿ ಸೆಪ್ಟೆಂಬರ್ – ಅಕ್ಟೋಬರ್ 2013 ರಲ್ಲಿ ಕ್ಷೀರಭಾಗ್ಯ ಯೋಜನೆ ಪ್ರಾರಂಭ ಆಯಿತು. ಪಿರ್ಯಾದುದಾರನಿಗೆ ಸದರಿ ಯೋಜನೆ ಅಡಿಯಲ್ಲಿ ವಿತರಣೆ ಅಥವಾ ಸಾಗಣೆ ಪೂರೈಕೆ ಆದೇಶ ಅಥವಾ ನೇಮಕ ಆದೇಶ ಕೊಟ್ಟಿರಲಿಲ್ಲ. ಸರ್ಕಾರದಿಂದ ಅಥವಾ ಕೆ.ಎಮ.ಎಫ್. ನಿಂದ ಪಿರ್ಯಾದಿಯ ನೇಮಕ ಆದೇಶ ಬಂದಿರಲಿಲ್ಲ. ಸರ್ಕಾರಕ್ಕೆ ಬೇಕಾದ 3000 ಹಾಲಿನ ಪುಡಿಯ ಸ್ವೀಕೃತಿ ರಶೀದಿಗಳನ್ನು ಶಾಲೆಗೆ ಕೊಡುವ ಬದಲಾಗಿ ನನ್ನ ಮೇಲೆ ಪಿರ್ಯಾದುದಾರ ಸುಳ್ಳು ದೂರನ್ನು ಕೊಟ್ಟಿದ್ದಾನೆ. ನಾನು ಯಾವುದೇ ಅನ್ಯಾಯ ಮಾಡಿಲ್ಲ, ನಾನು ಹಣಕ್ಕೆ ಬೇಡಿಕೆ ಇಟ್ಟಿಲ್ಲ ಮತ್ತು ಲಂಚ ತೆಗೆದುಕೊಂಡಿಲ್ಲ. ಕಚೇರಿ ಪ್ರಕ್ರಿಯೆ ಅನುಸರಿಸಲು ಹೋಗಿದ್ದರಿಂದ ನನ್ನ ಮೇಲೆ ಈ ರೀತಿ ದೂರನ್ನು ಕೊಟ್ಟಿದ್ದಾರೆ. ನಾನು ನನ್ನ 25 ವರ್ಷದ ಸೇವಾ ಅವಧಿಯಲ್ಲಿ ಒಂದು ನೋಟಿಸನ್ನು ಪಡೆದಿಲ್ಲ. ಸರ್ಕಾರದ ಯೋಜನೆ ಸಾಗಾಣಿಕೆದಾರರ ಪಾಲಾಗುವುದನ್ನು ತಪ್ಪಿಸಿ ನನಗೆ ನ್ಯಾಯಾಲಯ ನ್ಯಾಯ ಕೊಡಿಸಬೇಕು. ಮಕ್ಕಳಿಗೆ ಅನ್ಯಾಯ ಆಗಬಾರದು ಎಂದು ನಾನು ನಿರಂತರವಾಗಿ ಪ್ರಯತ್ನ ಪಟ್ಟೆ

(ಸಾಕ್ಷಿದಾರರ ಹೇಳಿಕೆಗಳ ಬಗ್ಗೆ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಆರೋಪಿ ಅದಕ್ಕೆ ಕೊಟ್ಟ ಉತ್ತರಗಳನ್ನು ಬೆರಳಚ್ಚುಗಾರರಿಗೆ ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ಮೂಲಕ ಬೆರಳಚ್ಚು ಮಾಡಿಸಿ ಈ ದಿನ

ದಿನಾಂಕಃ05-12-2024 ರಂದು ಯಥಾವತ್ತಾಗಿ ನಮೂದಿಸಿಕೊಳ್ಳಲಾಗಿರುತ್ತದೆ ಎಂದು ದೃಢೀಕರಿಸಲಾಗಿದೆ.)

(ಡಿ. ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.